

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 134 | Wednesday 29-01-2025 | E-mail : maruti.b.hosamani76@gmail.com | Page: 4 | Price : Rs. 1/-


## ಭರದಿಂದ ಸಾಗಿದ "ಮಹಾಕಾಲ" ಚಿತ್ರೀಕರಣ



**ಸಿಹಿ ಕಹಿ ಸುದ್ದಿ,**
**ಬೆಂಗಳೂರು :** ಎಸ್ ಹೆಚ್ ವಿ ಸಿನಿ ಕ್ರಿಯೇಷನ್ಸ್ ಬೆಂಗಳೂರು ಅವರ 'ಮಹಾಕಾಲ' ಕನ್ನಡ ಚಲನಚಿತ್ರದ ಚಿತ್ರೀಕರಣ ಮೈಸೂರಿನಲ್ಲಿ ಭರದಿಂದ ಸಾಗಿದೆ.

ಮೂಲತಃ ಮಂಡ್ಯ ಜಿಲ್ಲೆಯವರಾದ ನಿರ್ದೇಶಕ ಹರಿಪ್ರಸಾದ್ ಅವರು ಈಗಾಗಲೇ ಹಲವಾರು ಚಲನಚಿತ್ರಗಳಲ್ಲಿ ಕೆಲಸ ನಿರ್ವಹಿಸಿದ್ದು "ಮಹಾಕಾಲ"ವನ್ನು ಈಗ ಅವರೇ ನಿರ್ದೇಶನದ ಜೊತೆಗೆ ನಿರ್ಮಾಣ ಮಾಡುತ್ತಿದ್ದಾರೆ. ರಘು ಅ ರೂಗಿ(ಹುಬ್ಬಳ್ಳಿ) ಅವರ ಛಾಯಾಗ್ರಹಣದಲ್ಲಿ ಮೈಸೂರು ,ಬೆಂಗಳೂರು ಸುತ್ತಮುತ್ತ ಕಳೆದೊಂದು ವಾರದಿಂದ ಸತತ ಚಿತ್ರೀಕರಣ ನಡೆಸಲಾಗುತ್ತಿದೆ.

ಇದೊಂದು ಕಮರ್ಷಿಯಲ್ ಚಿತ್ರವಾಗಿದ್ದು ಚಿತ್ರದಲ್ಲಿ ನಾಲ್ಕು ಹಾಡುಗಳಿವೆ.ಮತ್ತು ಈ ಸಿನಿಮಾದಲ್ಲಿ ಮೂರು ಸಾಹಸ ದೃಶ್ಯಗಳಿದ್ದು, ಮೈಸೂರು , ಸಕಲೇಶಪುರ, ಹಾಸನ, ಬೆಂಗಳೂರು, ಸುತ್ತಮುತ್ತಲು ಹಾಡುಗಳನ್ನು ಚಿತ್ರೀಕರಿಸಲಾಗುತ್ತದೆ, ಒಂದು ಹಾಡನ್ನು ಹೊರರಾಜ್ಯದಲ್ಲಿ ಚಿತ್ರೀಕರಣ ಮಾಡುವ ಉದ್ದೇಶವಿದೆ. ಸದ್ಯ 45 ದಿನಗಳ ಕಾಲ ಚಿತ್ರೀಕರಣ ನಡೆಯಲಿದೆ ಎಂದು ನಿರ್ದೇಶಕ, ನಿರ್ಮಾಪಕರಾದ ಹರಿಪ್ರಸಾದ ತಿಳಿಸಿದ್ದಾರೆ.

ತಾಂತ್ರಿಕ ವರ್ಗದಲ್ಲಿ ಛಾಯಾಗ್ರಹಣ ರಘು ಅ. ರೂಗಿ(ಹುಬ್ಬಳ್ಳಿ), ಸಂಗೀತ ನಿರ್ದೇಶನ ಕಲ್ಕಿ ಅಭಿಷೇಕ್, ಸಾಹಸ ವೈಲೆಂಟ್ ವೇಲು, ಕೊರಿಯೋಗ್ರಾಫರ್ ರಾಜು ಮೈಸೂರ್. ಪ್ರಸಾಧನ ಅಪ್ಪು , ಶ್ರುತಿ, ಪತ್ರಿಕಾ ಸಂಪರ್ಕ ಡಾ. ಪ್ರಭು ಗಂಜಿಹಾಳ, ಡಾ. ವೀರೇಶ್ ಹಂಡಗಿ, ಸಹ ನಿರ್ದೇಶಕರು ಶ್ರೀಪಲ್ಲವಿ, ಹಾಗೂ ನಿರ್ದೇಶಕ ತಂಡದಲ್ಲಿ ಮನು ಸಾಮ್ರಾಟ್, ಸಾಗರ್, ಹರೀಶ್,ಪ್ರಕಾಶ್ ಕಡಕೋಳ ಅವರಿದ್ದಾರೆ. ನಾಯಕ ನಟನಾಗಿ ವಿನಯ್, ನಾಯಕಿಯಾಗಿ ಜೆಸ್ಸಿಕಾ ಡಯಾನ, ಅಶ್ವಿನಿ ಶೆಟ್ಟಿ, ಅಭಿನಯ, ರಾಮಕೃಷ್ಣ,ಮೂಗು ಸುರೇಶ್, ಶಶಿಧರ್ ಕೋಟೆ, ಚಂದ್ರಪ್ರಭ, ನಾನ್ ಸಿಂಕ್ ಬಸು, ಮೋಹನ್ ಮುಂತಾದ ತಾರಬಳಗವಿದೆ, ಶೀಘ್ರದಲ್ಲೇ ಚಿತ್ರೀಕರಣ ಮುಗಿಸಿ ಬೆಳ್ಳಿತೆರೆಗೆ ತರುವ ಹಂಬಲವನ್ನ ನಿರ್ದೇಶಕರು ಹೊಂದಿದ್ದಾರೆ.

**–ಡಾ.ಪ್ರಭು.ಗಂಜಿಹಾಳ.**
**ಮೊ–9448775346**

## ಕರಕುಶಲ ಕಲೆಯಲ್ಲಿ ಪಾಂಡಿತ್ಯ ಮೆರೆದ – ರೋಣ ನಗರದ ಪಾಂಡುರಂಗ ಮಾನ್ನಡೆ

**ಸಿಹಿ ಕಹಿ ಸುದ್ದಿ,**
**ರೋಣ :** ಪಟ್ಟಣದ ಶ್ರೀನಗರದ ನಿವಾಸಿ ಪಾಂಡುರಂಗ ಮಾನ್ನಡೆ ಅವರು ವೃತ್ತಿಯಲ್ಲಿ ಕೃಷಿಕ. ಓದಿರುವುದು 5 ನೇ. ತರಗತಿವರೆಗೆ ಆದರೆ, ಇವರ ಸೂಕ್ಷ್ಮ ಕೆತ್ತನೆಯ ಕಾರ್ಯ ಎಲ್ಲರೂ ಹುಬ್ಬೇರಿಸುವಂತೆ ಮಾಡುತ್ತದೆ. ಈ ಹಿಂದೆ ಗೌಂಡಿ ಕೆಲಸ ಮಾಡುತ್ತಿದ್ದ ಅವರು ಬಹಳ ದಿನಗಳ ವರೆಗೆ ಅದ–ಕ್ಕೆ ಒಗ್ಗಲಿಲ್ಲ. ಹೀಗಾಗಿ ತಮ್ಮ ನಾಲ್ಕೂವರೆ ಎಕರೆ ಜಮೀನಿನಲ್ಲಿ ಕುಟುಂಬದವ ರೊಂದಿಗೆ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡೇ ದಶಕಗಳಿಂದ ಪುಟ್ಟ ಮಾದರಿಯ ಕೃಷಿ ಪರಿಕರಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ.

ಅವರೊಬ್ಬ ಅಪ್ಪಟ ಕೃಷಿಕ. ಇರುವ ಸ್ವಲ್ಪ ಭೂಮಿಯಲ್ಲೇ ಉಳುಮೆ ಮಾಡಿ ಕೃಷಿಯಲ್ಲಿ ಖುಷಿ ಕಂಡವರು. ಆದ–ರೆ, ಅವರ ಪ್ರವೃತ್ತಿ ಮಾತ್ರ ಎಲ್ಲರನ್ನೂ ಹುಬ್ಬೇರಿಸುವಂತೆ ಮಾಡಿದೆ. ಕೃಷಿಕನ ಕೈಯಲ್ಲಿ ಅರಳಿದ ಕಲಾ ಕೃತಿಗಳು ಮನಸೂರೆ ಗೊಳ್ಳುತ್ತಿವೆ.

ಸಾಮಾನ್ಯ ಕುಟುಂಬಕ್ಕೆ ಸೇರಿದ ಪಾಂಡುರಂಗ ಮಾನ್ನಡೆ ಅವರ



ಆರ್ಥಿಕ ಪರಿಸ್ಥಿತಿ ಅಷ್ಟಕ್ಕಷ್ಟೆ. ಇವರು ತಯಾರಿಸುವ ಪುಟ್ಟ ಮಾದರಿಯ ಕೃಷಿ ಪರಿಕರಗಳಿಗೆ ಭಾರಿ ಬೇಡಿಕೆ ಇದೆ. ಹೆಚ್ಚಿನ ಬಂಡವಾಳ ತೊಡಗಿಸಿ ಹೆಚ್ಚೆಚ್ಚು ಸಾಮಗ್ರಿಗಳನ್ನು ತಯಾರಿಸುವ ಸಾಮರ್ಥ್ಯ ಇವರಿಗಿಲ್ಲ. ಇವರಲ್ಲಿನ ಕಲೆಯನ್ನು ಸದ್ಬಳಕೆ ಮಾಡಲು ಉದ್ದಿಮೆದಾರರೊಬ್ಬರು ಮುಂದೆ ಬಂದ–ರೆ, ಇವರ ಪ್ರತಿಭೆಗೆ ಅವಕಾಶ ದೊರೆ ತಂತಾಗುತ್ತದೆ.

ನಿರುಪಯುಕ್ತ ಹಳೆಯ ಸಾಗವಾನಿ, ತೇಗ, ಬೇವಿನ ಕಟ್ಟಿಗೆ, ಕಬ್ಬಿಣಗಳನ್ನೇ ಬಳಸಿಕೊಂಡು ಅದರಲ್ಲಿಯೇ ಕೃಷಿ ಕಲಾಕೃತಿ ರಚಿಸಿದ್ದಾರೆ. ಚಕ್ಕಡಿ, ಕೂರಿಗೆ, ಕುಂಟೆ, ನೇಗಿಲು,

ತತ್ರಾಣಿ, ಕೊಡಲಿ ಗುದ್ದಲಿ, ಸಲಿಕೆ, ಎತ್ತಿನಗಾಡಿ, ಶಹನಾಯಿ, ಎಣ್ಣೆ ತಯಾರಿಸುವ ಗಾಣ ಸೇರಿದಂತೆ ವಿವಿಧ ಕಲಾ ಕೃತಿಗಳ ದೃಶ್ಯ ವೈಭವ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ.

ಶಹನಾಯಿ ಮಾಂತ್ರಿಕ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರು ಬಳಕೆ ಮಾಡುತ್ತಿದ್ದ ಶಹನಾಯಿ ರೋಣ ನಗರದ ನಿವಾಸಿ ಮಾನಪಡೆ ಯವರ ಕೊಡುಗೆ ಎನ್ನುವುದು ವಿಶೇಷ. ಮಾನಪಡೆ ಯವರು ಕೆತ್ತನೆ ಮಾಡಿರುವ ಹಲವು ಕಲಾ ಕೃತಿಗಳು ರಾಜ್ಯದಾದ್ಯಂತ ಸದ್ದು ಮಾಡಿವೆ. ಇವರ ಈ ಸೇವೆಗೆ ಕನ್ನಡ ಸಾಹಿತ್ಯ ಪರಿಷತ್ ಗದಗ ರವರು ಸುವರ್ಣ ಸಿರಿ ಪ್ರಶಸ್ತಿ ಯನ್ನು ಕೊಟ್ಟು ಸನ್ಮಾನ ಮಾಡಲಾಗಿದೆ.

ತಮ್ಮ ಈ ನಿಸ್ವಾರ್ಥ ಸೇವೆಗಳನ್ನು ನಮ್ಮ ರಾಷ್ಟ್ರಕ್ರಾಂತಿ ಚಾನೆಲ್ ಮೂಲಕ ಪಾಂಡುರಂಗ ರವರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

ಇವರ ಈ ಕರ ಕುಶಲ ಸೇವೆಯನ್ನು ಮೆಚ್ಚಿ ಸರಕಾರದವರು ಇವರತ್ತ ಗಮನ ವಹಿಸಬೇಕು ಹಾಗೂ ಇವರು ಈಗಾಗಲೇ ಕಲಾವಿದರ ಮಾಶಾಸನಕ್ಕೆ ಅರ್ಜಿ ಸಲ್ಲಿಸಿರುತ್ತಾರೆ ಅವರ ಆ ಅರ್ಜಿ ಸ್ವೀಕಾರ ಗೊಂಡು ಬೇಗನೆ ಅವರ ಅವರ ಮಾಶಾಸನ ಕೈ ಸೇರಲು ನಮ್ಮ ರಾಷ್ಟ್ರಕ್ರಾಂತಿ ಚಾನೆಲ್ ಅವರಿಗೆ ಸಹಾಯ ಮಾಡುತ್ತದೆ.

ಎಲ್ಲಾ ಕರ್ನಾಟಕದ ಜನತೆಗೆ ನಮ್ಮ ರಾಷ್ಟ್ರಕ್ರಾಂತಿ ಚಾನೆಲ್ ಮನವಿ ಏನೆಂದರೆ ಇಂತಹ ಕಲಾವಿದರನ್ನು ಗುರುತಿಸಿ ಅವರನ್ನು ಬೆಳಕಿಗೆ ತರಬೇಕು ಸರ್ಕಾರ ಅವರತ್ತ ಗಮನ ಹರಿಸಿ ಅವರ ಆರ್ಥಿಕ ಸಹಾಯಕ್ಕೆ ಯಾವಾಗಲೂ ಸಹಕಾರ ನೀಡಬೇಕು ಎಂಬುದು ನಮ್ಮ ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನೆಲ್ ಆಶಯವಾಗಿದೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ ರೋಣ ಗದಗ**

## ಶಿಕ್ಷಣವನ್ನು ಪಡೆದು ದೇಶದ ಉನ್ನತ ಪದವಿಗಳನ್ನು ಪಡೆದು ಕೊಳ್ಳಿ, ವಿದ್ಯಾ ಸಂಸ್ಥೆಯೊಂದಿಗೆ ಹೆತ್ತ ತಂದೆ ತಾಯಿಗಳಿಗೂ – ಉತ್ತಮ ಮಕ್ಕಳಾಗಿ ಬಿ.ಸರಳ ಕಾವ್ಯ.

**ಸಿಹಿ ಕಹಿ ಸುದ್ದಿ,**
**ಹೊಸಪೇಟೆ :** ವಿಜಯನಗರ ಜಿಲ್ಲೆಯ ಹೊಸಪೇಟೆ ಪಟ್ಟಣದಲ್ಲಿ ಜನವರಿ 26 ರಂದು ನಡೆದ ಶ್ರೀ ಕಟ್ಟ ನಂಜಪ್ಪ ಶ್ರೇಷ್ಠಿ ವಿದ್ಯಾ ಸಂಸ್ಥೆ ಹೊಸಪೇಟೆ, ಶ್ರೀಮತಿ ಕಟ್ಟ ಕೃಷ್ಣ ವೇಣಮ್ಮ ಸ್ಮಾರಕ ಅನುದಾನಿತ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆ 21 ನೇ. ವಾರ್ಡ್ ಊರಮ್ಮನ ಬಯಲು ಶಾಲೆಯಲ್ಲಿ ನಡೆದ 76 ನೇ. ಗಣರಾಜ್ಯೋತ್ಸವ ದಿನದ ಆಚರಣೆಯನ್ನು ಮಾರಿಕಾಂಬ ಗ್ರಾಮೀಣ ಅಭಿವೃದ್ಧಿ ಮತ್ತು ಮಹಿಳಾ ಶಕ್ತಿ ಸಂಘದ ಇವರು ಕಾರ್ಯಕ್ರಮದ ಅಧ್ಯಕ್ಷತೆಯ ಅಧ್ಯಕ್ಷರಾದ ಬಿ.ಸರಳ ಕಾವ್ಯ ಇವರು ಧ್ವಜಾರೋಹಣ ನೆರವೇರಿಸಿ ಗಣರಾಜ್ಯೋತ್ಸವದ ಕುರಿತು ಮಾತನಾಡುತ್ತಾ ದೇಶ ಸ್ವಾತಂತ್ರ್ಯ ಪಡೆದು ಗಣರಾಜ್ಯವಾದಂತ ಈ ದಿನದಂದು ನಮ್ಮ ದೇಶದ ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂದು



ತಿಳಿಸುತ್ತಾ ವಿದ್ಯಾ ಸಂಸ್ಥೆಯ ಗುರುಗಳನ್ನು ನೆನೆಯುತ್ತಾ ಬಡ ಮಕ್ಕಳಿಗೆ ವಿದ್ಯಾ ದಾನ ಮಾಡುವಂತಹ ಮಕ್ಕಳಿಗೆ ಇಂದಿನಿಂದಲೂ ಅನೇಕ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಕಲಿಸಿ ಕೊಟ್ಟಂತ ಸಂಸ್ಥೆಯ ಕುರಿತು ಮಾತನಾಡುತ್ತಾ ವಿದ್ಯಾ ಸಂಸ್ಥೆಯ ಮುಖ್ಯಸ್ಥರಿಗೆ ಧನ್ಯವಾದಗಳು ಸರಳ ಕಾವ್ಯ ಅವರು ತಿಳಿಸಿದರು.

ಮಕ್ಕಳನ್ನು ಕುರಿತು ತಮ್ಮ ತಮ್ಮ ತಂದೆ–ತಾಯಿಗಳ ಕಷ್ಟಗಳನ್ನು ಅರ್ಥ ಮಾಡಿಕೊಂಡು ಪ್ರತಿಯೊಬ್ಬ ವಿದ್ಯಾರ್ಥಿಗಳು ಶ್ರಮ ವಹಿಸಿ ವಿದ್ಯಾ ಕಲಿತು ದೇಶದ ಉನ್ನತವಾದ ಪದವಿಗಳನ್ನು ಇಲ್ಲಿರುವಂತಹ ವಿದ್ಯಾರ್ಥಿಗಳು ನಿಮ್ಮದಾಗಿಸಿ ಕೊಳ್ಳಬೇಕು, ಹಾಗೆ ವಿದ್ಯಾ ಸಂಸ್ಥೆಯ ಹೆಸರನ್ನು ಬೆಳೆಸುವಂತಹ ಮಕ್ಕಳಾಗಬೇಕು ಹೆತ್ತ ತಂದೆ ತಾಯಿಗಳಿಗೆ ಉತ್ತಮವಾದಂತಹ ಮಕ್ಕಳಾಗಬೇಕು ಎಂದು ತಿಳಿಸಿದರು.

ಹಾಗೆ ಈ ಸಂದರ್ಭದಲ್ಲಿ ಸಂಸ್ಥೆಯ ಎಲ್ಲಾ ಮಕ್ಕಳಿಗೂ ಮಾರಿಕಾಂಬ ಗ್ರಾಮೀಣ ಅಭಿವೃದ್ಧಿ ಮತ್ತು ಮಹಿಳಾ ಶಕ್ತಿ ಸಂಘದಿಂದ ಮಕ್ಕಳಿಗೆ ಉಪಹಾರದ ವ್ಯವಸ್ಥೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾರಿಕಾಂಬ ಗ್ರಾಮೀಣ ಅಭಿವೃದ್ಧಿ ಮತ್ತು ಮಹಿಳಾ ಶಕ್ತಿ ಸಂಘದ ಪದಾಧಿಕಾರಿಗಳು, ವಿದ್ಯಾ ಸಂಸ್ಥೆಯ ಚೇರ್ಮನ್ ಕಟ್ಟ ಅಶೋಕ, ಮ್ಯಾನೇಜಿಂಗ್ ಡೈರೆಕ್ಟರ್ ಕಟ್ಟ ನಾಗರಾಜ್, ಪಟ್ಟ ವೆಂಕಟೇಶ್ ಅಡ್ಮಿನಿಸ್ಟರ್ ಸಂದೀಪ್, ವಿದ್ಯಾ ಸಂಸ್ಥೆ ನೂರಾರು ಮುದ್ದು ಮಕ್ಕಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್. ಹೊಸಪೇಟೆ**

## ಹುನಗುಂದ ಸರಕಾರಿ ಕೇಂದ್ರ ಶಾಲೆಯಲ್ಲಿ 76ನೇ ಸಂಭ್ರಮದ ಗಣರಾಜ್ಯೋತ್ಸವ ಆಚರಣೆ




**ಹುನಗುಂದ :** ನಗರದ ಸರ್ಕಾರಿ ಕೇಂದ್ರ ಯಲ್ಲಿ ಅತ್ಯಂತ ಸಡಗರ ಸಂಭ್ರಮದಿಂದ 76ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಶಾಲೆಯಲ್ಲಿ ಮುಖ್ಯಗುರುಗಳಾದ ಕೆವಿ ಮಡಿವಾಳರ್ ನೆರವೇರಿಸಿದರು ನಂತರ ಮಾತನಾಡಿ ಪ್ರಜಾ ರಾಜ್ಯೋತ್ಸವ ಕುರಿತು ವಿವರವಾಗಿ ಶಾಲಾ ಮಕ್ಕಳಿಗೆ ತಿಳಿಯುವ ಹಾಗೆ ವಿವರಿಸಿದರು ಅತಿಥಿಗಳಾಗಿ ನಿವೃತ್ತ ಶಿಕ್ಷಕ ಮನ್ನಾಪುರ್ ಗುರುಗಳು, ಸಂಗಮ ಮೋಟರ್ಸ್ ಮಾಲೀಕರಾದ ಮಹಾಂತೇಶ್ ಶೆಟ್ಟರ್ ಸೇರಿದಂತೆ ಎಸ ಡಿ ಎಂಸಿ ಅಧ್ಯಕ್ಷರು,ಸದಸ್ಯರು ಹಾಗೂ ಶಾಲಾ ಮಕ್ಕಳ ಪಾಲಕ ಪ್ರತಿನಿಧಿಗಳು ಕಾರ್ಯಕ್ರಮ ದಲ್ಲಿ ಉಪಸ್ಥಿತರಿದ್ದರು

ಈ ಸಂದರ್ಭದಲ್ಲಿ ಮೌಲಾನ ಅಬ್ದುಲ್ ಕಲಾಂ ಆಜಾದ್ ಶಾಲೆಯ ಮಕ್ಕಳು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

ಶ್ರೀಮತಿ ಎಸ್ ಎಸ್ ಗಂಗಾಧರಮಠ ಗುರು ಮಾತೆಯರು ಕಾರ್ಯಕ್ರಮ ನಿರೂಪಿಸಿದರು ಶ್ರೀಮತಿ ಆರ್ ಐ ಗಾಡಿವಾನ ಗುರು ಮಾತೆಯರು ಸ್ವಾಗತಿಸಿದರು ಎರಡು ಶಾಲೆಯ ಮಕ್ಕಳಿಂದ ಭಾಷಣ ಹಾಗೂ ವಿವಿಧ ಕಾರ್ಯಕ್ರಮಗಳು ಜರುಗಿದವು ಶ್ರೀಮತಿ ಚೆನ್ನಮ್ಮ ಕುಟಕ ಮರಿ ವಂದಿಸಿದರು.

## ಸಮಾಜ ಸೇವೆ ಪ್ರಶಸ್ತಿಗೆ ಡಾಕ್ಟರ್ ಬಾಬು.ಕೆ ಮಾದರ (ಮುರನಾಳ)



**ಸಿಹಿ ಕಹಿ ಸುದ್ದಿ,**
**ಬಾಗಲಕೋಟೆ :** ಏಶಿಯಾ ಇಂಟರ್ ನ್ಯಾಷನಲ್ ಕಲ್ಚರಲ್ ರಿಸರ್ಚ್ ಯುನಿವರ್ಸಿಟಿ ವತಿಯಿಂದ ದಿನಾಂಕ :–25/1/2025 ರಿಂದ ಶನಿವಾರ ಹೊಸೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಮಾಜ ಸೇವೆ ಪ್ರಶಸ್ತಿಗೆ ಡಾ. ಬಾಬು ಕೆ ಮಾದರ ಮುರನಾಳ ಹಲವಾರು ಸಂಘಟನೆಯ ಮೂಲಕ ಡಾ, ಬಿ.ಆರ್ ಅಂಬೇಡ್ಕರ್ ಸಂಘಟನೆ ವತಿಯಿಂದ ಗುರುತಿಸಿ ಕೊಂಡು ಸಮಾಜ ಸೇವೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಬಾಗಲಕೋಟೆಯ ಡಾ, ಬಾಬು. ಕೆ ಮಾದರ ಅವರು ಹಲವಾರು ವರ್ಷಗಳಿಂದ ಸಮಾಜ ಸೇವೆ ಸಾಧನೆ ಮಾಡುತ್ತಿದ್ದು, ಇಂದು ಅವರಿಗೆ ಪ್ರಶಸ್ತಿ ಲಭಿಸಿರುವುದು ಶ್ಲಾಘನೀಯ. ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಬಾಗಲಕೋಟೆ ಜಿಲ್ಲಾ ಮುರುನಾಳ್ ಗ್ರಾಮದವರಾದ ಶ್ರೀಯುತ ಬಾಬು. ಕೆ ಮಾದರ ಅವರಿಗೆ ಗೌರವ ಡಾಕ್ಟರ್ ಪದವಿ ಸತ್ಕಾರ ಪ್ರತಿಷ್ಠತ್ಮಾಕ ಸಂಸ್ಥೆಯಾದ ಏಶಿಯಾ ಇಂಟರ್ನ್ಯಾಷನಲ್ ಕಲ್ಬರಲ್ ಅಕಾಡೆಮಿಯಿಂದ ಬಾಗಲಕೋಟೆ ಜಿಲ್ಲೆಯವರು ಶ್ರೀಯುತ ಬಾಬು.ಕೆ ಮಾದರ ಮುರನಾಳ ಗ್ರಾಮದವರು ಅವರಿಗೆ ಗೌರವ ಡಾಕ್ಟರ್ ಪದವಿ ನೀಡಿ–ದರು. ಅವರು ಸಮಾಜ ಸೇವೆ ಮತ್ತು ಜಿಲ್ಲೆಯ ಜನ ಸೇವೆ ಪರಿಗಣಿಸಿ ಈ ಗೌರವ ಡಾಕ್ಟರ್ ಪದವಿ ನೀಡಲಾಗಿದೆ. ಅವರು ತಮ್ಮ ಸ್ವಂತ ಖರ್ಚಿನಲ್ಲಿ ಸಾರ್ವಜನಕರಿಗೆ ಸಮಸ್ಯೆಗಳನ್ನು ಪರಿಹರಿಸಿ ಎಷ್ಟೋ ಬಡ ಮಕ್ಕಳ ಸರಕಾರಿ ಹಾಸ್ಟೇಲ್ ಸೌಲಭ್ಯ ಶಾಲೆ ಕಾಲೇಜ್ ಸೌಲಭ್ಯಗಳನ್ನು ಗ್ರಾಮದಲ್ಲಿ ಜನರ ಸಮಗ್ರ ಸೇವೆ ಮಾಡಿ ಗ್ರಾಮದಲ್ಲಿ ಮತ್ತು ಜಿಲ್ಲೆಯಲ್ಲಿ ಮನೆ ಮಾತ ಆಗಿದ್ದಾರೆ. ಈ ಸೇವೆಯನ್ನು ಪರಿಗಣಿಸಿದ ಏಶಿಯಾ ಇಂಟರ್ ನ್ಯಾಷನಲ್ ಕಲ್ಬರಲ್ ಅಕಾಡಮೆ ಅವರು ಗೌರವ ಡಾಕ್ಟರ್ ಪದವಿಯನ್ನು ಹೊಸೂರು ತಮಿಳುನಾಡು ಕ್ಲಾಸ್ಪ ಹೋಟಲ್ ಸಭಾಂಗಣದಲ್ಲಿ ಪ್ರಮುಖ ಗಣ್ಯರೊಂದಿಗೆ ನೀಡಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರು ಮುಂತಾದವರು ಹಾಜರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ. ಇಲಕಲ್ಲ**

## ಅಂಬೇಡ್ಕರ್ ಸೇವಾ ಸಮಿತಿ (ರಿ)ಕರ್ನಾಟಕ ತಾಲೂಕು ಘಟಕದ ಪದಾಧಿಕಾರಿಗಳ ಆಯ್ಕೆ



**ಯಡ್ರಾಮಿ :** ನಗರದ ಪ್ರವಾಸಿ ಮಂದಿರದಲ್ಲಿ ಅಂಬೇಡ್ಕರ್ ಸೇವಾ ಸಮಿತಿ ರಿ, ಕರ್ನಾಟಕದ ನೂತನ ಪದಾಧಿಕಾರಿಗಳ ಆಯ್ಕೆ ಯಡ್ರಾಮಿ ತಾಲೂಕು ಅಧ್ಯಕ್ಷ, ಮಲ್ಲಿಕಾರ್ಜುನ, ಆಂದೋಲ,ಇವರ, ನೇತೃತ್ವದಲ್ಲಿ ಜರುಗಿತು ಯಡ್ರಾಮಿ ತಾಲೂಕು ಅಂಬೇಡ್ಕರ್ ಸೇವಾ ಸಮಿತಿ ಕರ್ನಾಟಕ , ಗೌರವ ಅಧ್ಯಕ್ಷ ರಾಗಿ, ಈರಣ್ಣ ಗು ಭಜಂತ್ರಿ,ಉಪಾಧ್ಯಕ್ಷರಾಗಿ, ಶ್ಯಾಮ್ ಜಿ ಪವಾರ್, ಸಂಗಮೇಶ್ ವಡಗೇರಾ, ಪ್ರದಾನ ಕಾರ್ಯ ದರ್ಶಿ ಯಾಗಿ,ವಿಜಯ ಕುಮಾರ್ ಜೆ ಮಲ್ಲೇದ್, ಕಾರ್ಯ ಧ್ಯಕ್ಷ ರಾಗಿ, ಮಲ್ಲು ನೀಲೂರ್, ಕಾರ್ಯದರ್ಶಿ ಯಾಗಿ, ಕನಕ ಮಲ್ಲು, ಹಾಗೂ ಸಂಚಾಲಕರಾಗಿ, ನಂದ್ ಕುಮಾರ್ ರಾಠೋಡ್, ಜಂಟಿ ಕಾರ್ಯದರ್ಶಿ ಯಾಗಿ, ಉಮೇಶ ರಾಠೋಡ್, ಖಜಾಂಚಿ ಯಾಗಿ, ವೀರೇಶ್ ಗೆಜ್ಜಿ, ಕಾನೂನು ಸಲಹೆಗಾರರಾಗಿ, ರಾಜು ಬುಟ್ನಾಳ್, ಮಹಿಳಾ ಘಟಕ ಅಧ್ಯಕ್ಷ ರಾಗಿ, ಮಹಾಲಕ್ಷ್ಮಿ ಆಲ್ಬಯಿ, ಆಯ್ಕೆಯಾಗಿದ್ದಾರೆ,

**ವರದಿ : ಮಾಳಿಂಗರಾಯ ಕಾರಗುಂಡ**

# ಮಕ್ಕಳ ಭವಿಷ್ಯ ಉಜ್ವಲ ಗೊಳ್ಳಲು ಗುಣಮಟ್ಟದ ಶಿಕ್ಷಣ ಅಗತ್ಯ–ತಂಬ್ರಳ್ಳಿ




**ಕೊಪ್ಪಳ :** ಇಂದಿನ ಮಕ್ಕಳೇ ಈ ನಾಡಿನ ಭಾವಿ ಪ್ರಜೆಗಳಾಗಿದ್ದು ಅವರ ಭವಿಷ್ಯ ಉಜ್ವಲ ಗೊಳ್ಳಲು ಅವರಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಅದುವೇ ಇಂದಿನ ಅಗತ್ಯವಾಗಿದೆ ಎಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಹೇಳಿದರು,

ಅವರು ಬುಧವಾರ ನಗರದ ನಿರ್ಮಿತಿ ಕೇಂದ್ರದ ಬಡಾವಣೆ ಬಹದ್ದೂರ್ ಬಂಡಿ ರಸ್ತೆಯಲ್ಲಿರುವ ಮಿಲತ್ ಶಿಕ್ಷಣ ಮತ್ತು ಕಲ್ಯಾಣ ಸಂಸ್ಥೆಯ ಮಿಲ್ಲತ್ ಪಬ್ಲಿಕ್ ಶಾಲೆಯಲ್ಲಿ ಏರ್ಪಡಿಸಿದ ಸಂತೆ ಮೇಳ, ವಿಜ್ಞಾನ ಮತ್ತು ಗಣಿತ ವಸ್ತು ಪ್ರದರ್ಶನದ ಉದ್ಘಾಟನೆ ನೆರವೇರಿಸಿ ಮಾತನಾಡಿದರು,

ಮುಂದುವರೆದು ಮಾತನಾಡಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರ ಹಾಗೂ ಸಾಮಾನ್ಯ ಜ್ಞಾನ ಮಾಹಿತಿ ನೀಡಬೇಕು ಸಂತೆ ಮೇಳ ದ ಪರಿಕಲ್ಪನೆ ವಿದ್ಯಾರ್ಥಿಗಳಿಗೆ ಗೊತ್ತಾಗಬೇಕು ಸಾಮಾನ್ಯ ಜ್ಞಾನ ವ್ಯಾಪಾರ ಜ್ಞಾನ ಗೃಹ ಬಳಕೆ ಅಗತ್ಯ ವಸ್ತುಗಳ ಖರೀದಿ ಇತರ ವಿಷಯದ ಬಗ್ಗೆ ಮಕ್ಕಳಿಗೆ ತಿಳುವಳಿಕೆ ಮೂಡಿ ಬರಲು ಸಂತೆ ಮೇಳ ಅತ್ಯಂತ ಸಹಕಾರಿಯಾಗಿದೆ ವಿಜ್ಞಾನ ಮತ್ತು ಗಣಿತ ವಸ್ತು ಪ್ರದರ್ಶನ ವಿದ್ಯಾರ್ಥಿ ಮಕ್ಕಳಲ್ಲಿ ಜಾಗೃತಿ ಮೂಡಿಸುತ್ತದೆ ಇಂತಹ ಒಳ್ಳೆ ಕಾರ್ಯಕ್ರಮಗಳನ್ನು ಇಲ್ಲಿನ ಮಿಲ್ಲತ್ ಶಾಲೆಯವರು ಏರ್ಪಡಿಸಿರುವುದು ಒಳ್ಳೆಯ ಕಾರ್ಯವಾಗಿದೆ ಎಂದರು.

ಸಂತೆ ಮೇಳದ ಉದ್ಘಾಟನೆಯನ್ನು ಹಿರಿಯ ವೈದ್ಯರಾದ ಡಾ, ರಾಧಾ ಕುಲಕರಣಿ ನೆರವೇರಿಸಿ ಮಾತನಾಡಿ ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ನೀಡಲು ಇಂತಹ ಕಾರ್ಯಕ್ರಮಗಳು ಅತ್ಯಂತ ಸಹಕಾರಿಯಾಗಿದೆ ಎಂದರು,

ಸಮಾಜದ ಯುವ ನಾಯಕ ಲ್ಯಾಂಡ್ ಡೆವಲೋಪರ್‌ಸೈಯದ್‌ನಾಸೀರ್‌ಹುಸೇನ್ ರವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಿಲ್ಲತ್ ಶಾಲೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಘೋಷಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಕಾರ್ಯದರ್ಶಿ ಮೀನಾಕ್ಷಿ ಬಣ್ಣದ ಬಾವಿ ಮಾತನಾಡಿ ಎಲ್ಲಾ ಕ್ಷೇತ್ರದ ಅಭಿವೃದ್ಧಿ ಶಿಕ್ಷಣ ರಂಗದಲ್ಲಿ ಅಡಗಿದೆ ಮೊದಲು ನಾವು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದರು, ಕೊಪ್ಪಳ ಇನ್ನರ್ ವ್ಹೀಲ್ ಕ್ಲಬನ ಎಡಿಟರ್ ನಾಗವೇಣಿ ಗರುರ್ ಮುಖ್ಯ ಅತಿಥಿಗಳಾಗಿ ವೇದಿಕೆ ಮೇಲೆ ಉಪಸ್ಥಿತರಿದ್ದು ಶಿಕ್ಷಣ ಮತ್ತು ಕಲ್ಯಾಣ ಸಂಸ್ಥೆಯ ಮುಖ್ಯ ಸಲಹೆಗಾರ ಎಂ ಸಾಧಿಕ್ ಅಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸಂಸ್ಥೆ ಮತ್ತು ಶಾಲೆ ನಡೆದು ಬಂದ ದಾರಿ ಬಗ್ಗೆ ವಿವರಿಸಿದರು, ವೇದಿಕೆ ಮೇಲೆ ಪದಾಧಿಕಾರಿಗಳಾದ ಅಬ್ದುಲ್ ಅಜೀಜ್ ಮಾನ್ವಿ ಕರ್, ಎಂ ಡಿ ಜಹೀರ್ ಅಲಿ, ಸೈಯದ್ ಇಮಾಮ್ ಹುಸೇನ್ ಸಿಂದೋಗಿ, ಮತ್ತು ದಾವೂದ್ ಹುನಗುಂದ ಶಾಲೆಯ ಮುಖ್ಯ ಶಿಕ್ಷಕ ಮೊಹಮ್ಮದ್ ಅಜೀಜ್ ರೆವಡಿ ಸೇರಿದಂತೆ ಪಾಲಕರ ಪ್ರತಿನಿಧಿ ಪತೇಹಸಾಬ್ ಚುಟ್ಟ ಅಲ್ಲದೆ ಸಹಶಿಕ್ಷಕರು ಪಾಲಕರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಶಾಲಾ ಅವಧಿಯಲ್ಲಿ ಮಕ್ಕಳು ಶಾಲೆಯಲ್ಲಿರುವಂತೆ ನೋಡಿಕೊಳ್ಳಿ: ನ್ಯಾ. ಮಹಾಂತೇಶ ದರಗದ್

**ಕೊಪ್ಪಳ :** ವಿವಿಧ ಕಾಯ್ದೆಯಡಿಯಲ್ಲಿ 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳು ಶಾಲಾ ಅವಧಿಯಲ್ಲಿ ಶಾಲೆಯಲ್ಲಿರುವುದು ಕಡ್ಡಾಯವಾಗಿದ್ದು, ಈ ಅವಧಿಯಲ್ಲಿ ಮಕ್ಕಳು ಶಾಲೆಯಲ್ಲಿಯೇ ಇರುವಂತೆ ನೋಡಿಕೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್ ದರಗದ್ ಹೇಳಿದರು.

ಅವರು ಬುಧವಾರ ಕೊಪ್ಪಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಂಯುಕ್ತಾಶ್ರಯದಲ್ಲಿ "ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 ಪರಿಷ್ಕರಣೆ 2023ರ ಹಾಗೂ ಶಾಲೆಯಲ್ಲಿದೆ ಶಿಕ್ಷಣದ ಜೊತೆ ರಕ್ಷಣೆ" ಎಂಬ ವಿಷಯದ ಕುರಿತು ಸರಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಒಂದು ವೇಳೆ ಮಕ್ಕಳು ಶಾಲೆಯಿಂದ ಹೊರಗುಳಿದಲ್ಲಿ, ದುಷ್ಚಟಗಳಿಗೆ ಬಲಿಯಾಗಬಹುದು. ಮಾದಕ ವ್ಯಸನಿಗಳಾಗಬಹುದು, ಕಾರ್ಮಿಕರಾಗಿ ದುಡಿಯುತ್ತಾ ಕಿರುಕುಳ, ಹಲ್ಲೆ ಅಥವಾ ದೌರ್ಜನ್ಯಗಳಿಗೆ ಸಿಲುಕಬಹುದಾಗಿದೆ. ಅಲ್ಲದೇ ಬಾಲ್ಯವಿವಾಹಕ್ಕೆ ತುತ್ತಾಗಿ ಪ್ರತಿ ದಿನವು ಲೈಂಗಿಕ ದೌರ್ಜನ್ಯಗಳಿಗೆ, ಬಾಲ ಗರ್ಭಿಣಿಯರಾಗಿ ಸಾವಿಗೆ ತುತ್ತಾಗಬಹುದಾಗಿದೆ ಅಥವಾ ಸಮಾಜಘಾತುಕ ಚಟುವಟಿಕೆಗಳಲ್ಲಿ ತೊಡಗಬಹುದಾಗಿದೆ. ಆದ್ದರಿಂದ ಯಾವುದೇ ಮಗು ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು.ಮಕ್ಕಳುಶಾಲೆಯಿಂದಹೊರಗುಳಿದಿದ್ದಲ್ಲಿ ಪಾಲಕರ ಮನವೊಲಿಸಿ ಅಂತಹ ಮಕ್ಕಳನ್ನು ಮರಳಿ ಶಾಲೆಗೆ ಕರೆದುಕೊಂಡು ಬನ್ನಿ. ಮಕ್ಕಳು ಶಾಲೆಯಿಂದ ಹೊರಗುಳಿದು ಬಾಲಕಾರ್ಮಿಕರಾಗಿ ದುಡಿಯುವುದು, ಬಾಲ್ಯವಿವಾಹಕ್ಕೆ ಒಳಗಾಗಿಲೈಂಗಿಕಹಲ್ಲೆ,ಕಿರುಕುಳವನ್ನುಅನುಭವಿಸುವುದನ್ನು ಹಾಗೂ ಬಾಲ ಗರ್ಭಿಣಿಯರಾಗುವುದನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಸಹಿಸುವುದಿಲ್ಲ. ಯಾವುದೇ ತುರ್ತು ಸಂದರ್ಭದಲ್ಲಿಮಕ್ಕಳಸಹಾಯವಾಣಿ–1098ಅಥವಾ112ಗೆ ಕರೆ ಮಾಡಿ ಮಾಹಿತಿಯನ್ನುನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನುವಹಿಸಿದ್ದ ಕೊಪ್ಪಳ ಕ್ಷೇತ್ರ ಶಿಕ್ಷಣಾಧಿಕಾರಿ ಟಿ ಶಂಕ್ರಯ್ಯ ಅವರು ಮಾತನಾಡಿ, ರಾಜ್ಯದ ದೃಷ್ಟಿಕೋನ ರಾಜ್ಯದಲ್ಲಿನ ಪ್ರತಿ ಮಗುವು ಸುರಕ್ಷಿತ, ರಕ್ಷಣಾತ್ಮಕ ಮತ್ತು ಸಶಕ್ತ ಪರಿಸರದಲ್ಲಿ ಬೆಳೆಯುವುದರೊಂದಿಗೆ, ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಹಾಗೂ ಮಗುವು ತನ್ನ ಸಾಮರ್ಥ್ಯವನ್ನು ತಲುಪಲು ಅವಕಾಶಗಳನ್ನು ಒದಗಿಸುತ್ತದೆ. ಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸಲು ಮತ್ತು ಆನಂದಿಸಲು ಅನುಕೂಲಕರವಾದ ಪರಿಸರವನ್ನು ನಿರ್ಮಿಸಲು ರಾಜ್ಯದಲ್ಲಿನ ಎಲ್ಲಾ ಭಾಗೀದಾರರು ಅಂದರೆ, ಪೋಷಕರು, ಆರೈಕೆ ಸೇವೆಗಳನ್ನು ನೀಡುವವರು ಮತ್ತು ಸಮುದಾಯ ಒಟ್ಟುಗೂಡಿ ಕೆಲಸ ಮಾಡುವುದರೊಂದಿಗೆ ಮಕ್ಕಳ ಕುರಿತಾದ ತಾರತಮ್ಯಗಳನ್ನು ನಿವಾರಿಸುವ ಹಾಗೂ ಮಕ್ಕಳ ಭಾಗವಹಿಸುವಿಕೆ ಸಂಭಾಷಣೆ ಮತ್ತು ಅಭಿಪ್ರಾಯಗಳನ್ನು ಗೌರವಿಸುವುದರೊಂದಿಗೆ ಮಗುವಿನ ಘನತೆಯನ್ನು ಎತ್ತಿ ಹಿಡಿಯುವುದಾಗಿದೆ ಎಂದರು.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ (ಕೆಎಸ್‌ಸಿಪಿಪಿ) ಯ ಮಕ್ಕಳ ಅಧಿಪತ್ಯದ ತತ್ವವನ್ನಾಧರಿಸಿದ ಮಕ್ಕಳ ರಕ್ಷಣೆಯ ಒಂದು ಸಮಗ್ರ ಭಾಗವಾಗಿದೆ. ಜಿಲ್ಲೆಯಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಭೋದಕೇತರ ಸಿಬ್ಬಂದಿಗಳ ವಿರುದ್ಧ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ–2012ರಡಿಯಲ್ಲಿ ಪ್ರಕರಣ ದಾಖಲಾಗಿದ್ದು, ನ್ಯಾಯಾಲಯವು ಶಿಕ್ಷೆಯನ್ನು ವಿಧಿಸಿರುವ ಘಟನೆಗಳು ವರದಿಯಾಗಿವೆ. ಆದ್ದರಿಂದ ಜಿಲ್ಲೆಯಲ್ಲಿನ ಪ್ರತಿ ಶೈಕ್ಷಣಿಕ ಸಂಸ್ಥೆಗಳಲ್ಲಿಯೂ "ಮಕ್ಕಳ ಸುರಕ್ಷತಾ ನೀತಿ"ಯನ್ನು ಕಡ್ಡಾಯವಾಗಿಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು.

ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ ಅವರು ಮಾತನಾಡಿ, "ರಾಜ್ಯವು ಯಾವುದೇ ಮಗು, ಯಾವುದೇ ರೀತಿಯ ದೈಹಿಕ ಅಥವಾ ಮಾನಸಿಕ ಹಿಂಸೆ, ದೌರ್ಜನ್ಯ, ನಿರ್ಲಕ್ಷ್ಯ ಅಥವಾ ಶೋಷಣೆಗೆ ಸಿಲುಕಿರುವವರನ್ನು ಅಥವಾ ಒಳಗಾಗಬಹುದಾದವರನ್ನು ರಕ್ಷಿಸಲು ಮುಂಜಾಗ್ರತಾ ಮತ್ತು ಸುಧಾರಣೆಯ ಎರಡು ರೀತಿಯ ಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಸರ್ಕಾರವು ರಾಜ್ಯದಲ್ಲಿನ ಎಲ್ಲಾ ಮಕ್ಕಳ ಕಾನೂನಾತ್ಮಕ ಹಕ್ಕುಗಳನ್ನು ರಕ್ಷಿಸುವುದರೊಂದಿಗೆ ಅವರ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಅಗತ್ಯಗಳನ್ನು ಒಳಗೊಂಡಂತೆ ಅವರ ಸುರಕ್ಷತೆಯನ್ನು ಖಚಿತಪಡಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿದೆ. ಶಾಲೆಗಳಲ್ಲಿ ಅವಶ್ಯವಿರುವ ಯಾವುದೇ ಮೂಲಭೂತ ಅವಶ್ಯಕತೆಗಳನ್ನು "ಗ್ರಾಮ ಪಂಚಾಯತ್‌ನಲ್ಲಿ ಲಭ್ಯವಿರುವ, ಮಕ್ಕಳ ಆಯ್ಯ–ವ್ಯಯದಲ್ಲಿ ಭರಿಸಲು ಅವಕಾಶವಿದ್ದು ಹಾಗೂ ಸ್ಥಳೀಯ ಸಂಪನ್ಮೂಲಗಳನ್ನುಬಳಸಿಕೊಂಡು ಕಡ್ಡಾಯವಾಗಿಒದಗಿಸಿ. ಪ್ರತಿಯೊಂದು ಸಂಸ್ಥೆಯಲ್ಲೂ ಅಧಿಕಾರಿಗಳು, ಸಿಬ್ಬಂದಿಗಳ ಪೊಲೀಸ್ ಪರಿಶೀಲನೆ, ಮಕ್ಕಳ ಬದ್ಧತಾ ಪತ್ರ, ಮಕ್ಕಳ ಸಲಹಾ ಪೆಟ್ಟಿಗೆಗಳನ್ನು, ಸಿಬ್ಬಂದಿಗಳ ಬದ್ಧತಾ ಪತ್ರವನ್ನು ಪಡೆಯುವುದು ಅತ್ಯವಶ್ಯಕವಾಗಿದೆ ಎಂದರು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಮಾಜ ಕಾರ್ಯಕರ್ತ ರವಿಪವಾರ್ ಅವರುಮಕ್ಕಳಹಕ್ಕುಗಳ ಬಗ್ಗೆಮತ್ತುಔಟರೀಚ್ ವರ್ಕರ್‌ಪ್ರತಿಭಾಕಾಶಿಮಠಅವರು"ಕರ್ನಾಟಕರಾಜ್ಯಮಕ್ಕಳ ರಕ್ಷಣಾ ನೀತಿ–2016 ಪರಿಷ್ಕರಣೆ 2023ರ ಬಗ್ಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಕೊಪ್ಪಳ ಮತ್ತು ಅಳವಂಡಿ ವಲಯದ ಮುಖ್ಯೋಪಾಧ್ಯಾಯರುಗಳು ಭಾಗವಹಿಸಿದ್ದರು.

## ಸಂಗೊಳ್ಳಿ ರಾಯಣ್ಣ ರಾಜ್ಯ ಯುವ ಪ್ರಶಸ್ತಿ ಪ್ರಕಟ

# ಕೊಪ್ಪಳದ ಸಂಗೀತಾ, ವಿಜಯನಗರದ ಅಂಜು, ಬಳ್ಳಾರಿಯ ಹನುಮಯ್ಯಗೆ ಪ್ರಶಸ್ತಿ



**ಕೊಪ್ಪಳ :** ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ ಬೆಂಗಳೂರು ಮತ್ತು ಬೆಳಗಾವಿ ಜಿಲ್ಲಾ ಘಟಕ ಕೊಡಮಾಡುವ ಪ್ರತಿಷ್ಠಿತ ಸಂಗೊಳ್ಳಿ ರಾಯಣ್ಣ ರಾಜ್ಯ ಯುವ ಪ್ರಶಸ್ತಿಗೆ ರಾಜ್ಯದ ಮೂವತ್ತೊಂದು ಜಿಲ್ಲೆಯ ಮೂವತ್ತೊಂದು ಜನರಿಗೆ ಮತ್ತು ಒಂದು ಸಂಘ ಪ್ರಶಸ್ತಿಯನ್ನು ಘೋಷಣೆ ಮಾಡಿ ರಾಜ್ಯ ಅಧ್ಯಕ್ಷ ಎಸ್. ಬಾಲಾಜಿ ಆದೇಶಿಸಿದ್ದಾರೆ.

ಕಲಬುರಗಿ ವಿಭಾಗದ ಕೊಪ್ಪಳದಿಂದ ಶಿಕ್ಷಣ ಕ್ಷೇತ್ರ ಮತ್ತು ಸಮಾಜ ಸೇವೆಗೆ ಸಂಗೀತಾ ಬಿ. ಕಲ್ಲೇಶ ಮೆಣೆದಾಳ, ವಿಜಯನಗರ ಜಿಲ್ಲೆಯಿಂದ ಅಂತರಾಷ್ಟ್ರೀಯ ಭರತನಾಟ್ಯ ಕಲಾವಿದೆ ಪಿ. ಅಂಜು, ಬಳ್ಳಾರಿ ಜಿಲ್ಲೆಯಿಂದ ಯುವ ಸಂಘಟನೆ ಮತ್ತು ಸಮಾಜ ಸೇವೆಗೆ ಹನುಮಯ್ಯ ದೊಡ್ಡಬಸಪ್ಪ ಜಿ., ಕಲಬುರಗಿಯಿಂದ ಚನ್ನವೀರ್ ಬಿ. ಕಣ್ಣಿಗಿ, ಬೀದರ ಜಿಲ್ಲೆಯ ರಾಜಕುಮಾರ ಮೋರೆ, ಯಾದಗಿರಿ ಜಿಲ್ಲೆಯ ನಿಂಗಣ್ಣ ದೇವಪ್ಪ ಲಾಠಿ ಮತ್ತು ರಾಯಚೂರ ಜಿಲ್ಲೆಯ ಮಹೇಶ್ ಕುಮಾರ್ ಅವರು ಆಯ್ಕೆಯಾಗಿದ್ದು ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲೂಕ ಹಳ್ಳೂರಿನ ಇಟ್ಟಪ್ಪ ದೇವರ ರಂಗ ವೇದಿಕೆಯಲ್ಲಿ ಜನೇವರಿ 27 ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಕಲಬುರಗಿ ವಿಭಾಗೀಯ ಸಂಚಾಲಕ ಮಂಜುನಾಥ ಜಿ. ಗೊಂಡಬಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 80 ಅಡಿ ಎತ್ತರದ ಧರ್ಮಧ್ವಜಕ್ಕೆ ಚಾಲನೆ





**ಕೆ.ಆರ್.ಪೇಟೆ :** ತಾಲೂಕಿನ ಕಾಪನಹಳ್ಳಿ ಗವಿಮಠದ ಸ್ವತಂತ್ರ ಸಿದ್ಧಲಿಂಗೇಶ್ವರ ದೇವಾಲಯದ ಆವರಣದಲ್ಲಿ ಕಾಪನಹಳ್ಳಿ – ದೊದ್ದನಕಟ್ಟೆ ಗ್ರಾಮದ ಯುವಕರು ಸಿದ್ದಲಿಂಗೇಶ್ವರ ಸ್ವಾಮಿಗೆ ಮಹಾಮಂಗಳಾರತಿ ನೆರವೇರಿಸಿ ನಂತರ ಶುಭ ಗಳಿಗೆಯಲ್ಲಿ ಕಾಪನಹಳ್ಳಿ ಗವಿಮಠದ ಚಂದ್ರಶೇಖರಸ್ವಾಮೀಜಿರವರು ಧ್ವಜ ಸ್ತಂಭಕ್ಕೆ ಪೂಜೆ ಸಲ್ಲಿಸುವ ಮೂಲಕ ಸುಮಾರು 80ಅಡಿ ಎತ್ತರದ ಧರ್ಮಧ್ವಜವನ್ನು ಸ್ಥಾಪನೆ ಮಾಡಲಾಯಿತು,

ಶ್ರೀ ಕ್ಷೇತ್ರ ಗವಿಮಠದ ಪೀಠಾಧಿಪತಿ ಶ್ರೀ ಚನ್ನವೀರ ಸ್ವಾಮೀಜಿಯವರು ಮಾತನಾಡಿ ಪುರಾಣ ಪ್ರಸಿದ್ಧ ಈ ಪುಣ್ಯಭೂಮಿಯಲ್ಲಿ ಹಿಂದೂ ಧರ್ಮದ ಸಂಕೇತವಾದ ಧರ್ಮಧ್ವಜ ಸ್ತಂಭವನ್ನು ಸ್ಥಾಪಿಸಲು ಕಾಪನಹಳ್ಳಿ–ದೊದ್ದನಕಟ್ಟೆ ಗ್ರಾಮದ ಯುವಕರು ಮುಂದಾಗಿದ್ದು ನಮಗೆಲ್ಲಾ ಸಂತಸದ ವಿಷಯ ಆಗಾಗಿ ಈ ಪುಣ್ಯಭೂಮಿ ಧರ್ಮಧ್ವಜ ಸ್ತಂಭವನ್ನು ಸ್ಥಾಪಿಸುವ ಮೂಲಕ ಹಿಂದೂ ಧರ್ಮ ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು,

ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಗವಿಮಠ ಪೀಠಾಧಿಪತಿ ಶ್ರೀ ಶ್ರೀ ಶ್ರೀ ಚನ್ನವೀರ ಸ್ವಾಮೀಜಿಯವರು, ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಗೋವಿಂದರಾಜು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷರಾದ ಲೋಕೇಶ್.ವಿ, ಪ್ರಧಾನ ಕಾರ್ಯದರ್ಶಿ ಸಾಯಿಕುಮಾರ್, ಹೇಮಂತ್ ಸ್ವಾಮೀಜಿ, ಮೃತ್ಯುಂಜಯ ಸ್ವಾಮೀಜಿ, ಚಂದನ್. ಮಾಣಿಕ್ಯ.ರೋಹಿತ್, ಹೇಮಂತ್.ರಾಮು, ಕಿರಣ್. ಮನು ಸೇರಿದಂತೆ ಮತ್ತಿತರು ಭಾಗವಹಿಸಿದ್ದರು.

**ವರದಿ :ಎಸ್ ರವಿ ಹೊನ್ನೇನಹಳ್ಳಿ**

# ಇಟ್ಟಿಗೆ ಭಟ್ಟಿಯಲ್ಲಿ ದಲಿತರ ಮೇಲೆ ಮಾಡಿದ ಮಾರಣಾಂತಿಕ ಹಲ್ಲೆ ಖಂಡಿಸಿ ಮನವಿ




**ಇಂಡಿ :** ಇಟ್ಟಿಗೆ ಬಟ್ಟೆಯಲ್ಲಿ ನಡೆದ ದಲಿತ ದೌರ್ಜನ್ಯ ಮತ್ತು ಮಾರಣಾಂತಿಕ ಹಲ್ಲೆ ಮಾಡಿದ ದುಷ್ಕರ್ಮಿಗಳ ಮೇಲೆ ದಲಿತ ದೌರ್ಜನ್ಯ ಅಡಿ ಕಾನೂನಿನ ಮೂಲಕ ಶಿಕ್ಷೆ ವಿಧಿಸಲು ಭೀಮ್ ಸರಕಾರ ಇಂಡಿ ಘಟಕದಿಂದ ಇಂಡಿ ಉಪವಿಬಾಧಿಕಾರಿ ಅಭಿದ್ ಗದ್ಯಾಳ ಅವರಿಗೆ ಮನವಿ ಸಲ್ಲಿಸಲಾಯಿತು.

ವಿಷಯಕ್ಕೆ ಸಂಬಧಿಸಿದಂತೆ ವಿಜಯಪೂರ ನಗರದ ಸಿಂದಗಿ ರಸ್ತೆ ಮೇಲಿರುವ ಇಟಂಗಿ ಬಟ್ಟಿಯ ಮಾಲಿಕರಾದ ಖೇಮು ರಾಠೋಡ ಹಾಗೂ ಅವರ ತಂಡದವರು ತಮ್ಮ ಬಟ್ಟಿ ಯಲ್ಲಿ ಕೆಲಸ ಮಾಡುವ ದಲಿತ ಕೂಲಿ ಕಾರ್ಮಿಕರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದಾರೆ ಸುಮಾರು 2–3 ವರ್ಷದಿಂದ ಈ ಇಟ್ಟಿಗೆ ಬಟ್ಟಿ ಯಲ್ಲಿ ಕೆಲಸ ಮಾಡುತ್ತಿರುವ ಬಾಗಲಕೋಟೆ ಜಿಲೆಯ ಜಮಂಖಂಡಿ ತಾಲುಕಿನ ಒಂದು ಗ್ರಾಮದ ಸದಾಶಿವ ಬಸಪ್ಪ ಮಾದರ, ಸದಾಶಿವ ಬಬಲೇಶ್ವರ ಹಾಗೂ ಉಮೇಶ ಮಾದರ ಇವರು ಸಂಕ್ರಮಣ ಹಬ್ಬಕ್ಕೆ ಊರಿಗೆ ಹೋಗಿದ್ದು ಇವರನ್ನು ದುಡ್ಡು ಕೋಡುತ್ತೆನೆಂದು ಕರಿಸಿದ ಖೇಮು ರಾಠೋಡ ಎಂಬ ದುಷ್ಕರ್ಮಿ ಮತ್ತು ತಂಡದವರಿಂದ ಕೂಡಿ ಇವರುಗಳ ಮೇಲೆ ಮಾರಾಣಾಂತಿಕ ಹಲ್ಲೆ ಎಸಗಿದ್ದಾನೆ ಇವರಿಗೆ ಹಲವಾರು ರಾಜಕೀಯ ನಾಯಕರ ಬೆಂಬಲ ಇರುವುದರಿಂದ ಜಿಲ್ಲಾ ಆಡಳಿತ ಕಾನುನೂ ಕ್ರಮ ಕೈಗೋಳ್ಳಲು ಹಿಂಜರೆಯತ್ತಿದೆ ಆದ ಕಾರಣ ಇದರ ಬಗ್ಗೆ ತಾವುಗಳು ಕ್ರಮಕ್ಕೆ ಆಗ್ರಹಿಸುತ್ತವೆ ಎಂದು ಭೀಮ್ ಸರಕಾರ ಸಂಘಟನೆ ತಾಲೂಕು ಅಧ್ಯಕ್ಷ ಆನಂದ ಅಗರಖೇಡ ಒತ್ತಾಯಿಸಿದರು.

ಇದೆ ಸಂದರ್ಭದಲ್ಲಿ ತಾಲೂಕ ಭೀಮ್ ಸರಕಾರ ಸಂಘಟನೆಯ ಪ್ರಧಾನ ಕಾರ್ಯದರ್ಶಿಗಳು ಅಶೋಕ್ ನಾಲ್ಕೋಡಿ, ತಾಲೂಕ ಸಂಘಟನಾ ಸಂಚಾಲಕರಾದ ರಾಹುಲ್ ಮನಗೂಳಿ, ಆಕಾಶ್ ದೊಡಮನಿ, ದತ್ತು ಬಂಡೇನವರ್, ಮೇಘರಾಜ ವಾಲಿಕಾರ, ಶಿವರಾಜಕುಮಾರ ವಾಲಿಕಾರ ತಾಲೂಕಿನ ಭೀಮ್ ಸರಕಾರ ರ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ವಾಲ್ಮೀಕಿ ಸಮಾಜದ ವ್ಯಕ್ತಿ ಕೊಲೆ ಪ್ರಕರಣ: ಸಿಓಡಿ ತನಿಖೆಗೆ ವಹಿಸಲು ಮಲ್ಲಿಕಾರ್ಜುನ ಬಟಗಿ ಆಗ್ರಹ

**ವಿಜಯಪುರ :** ಜಿಲ್ಲೆಯ ಸಿಂದಗಿ ತಾಲೂಕಿನ ಕಲಕೇರಿ ಗ್ರಾಮದ ಮುದಕಣ್ಣ ದೊರೆ ಅವರನ್ನು ಕೊಲೆ ಮಾಡಿ ಅವರ ತಂದೆಗೆ ಚಿತ್ರಹಿಂಸೆ ನೀಡಿದ್ದಲ್ಲದೆ ಮನೆಯಲ್ಲಿದ್ದ ಮಹಿಳೆಯರ ಮೇಲೆ ದೌರ್ಜನ್ಯ ಎಸಗಿ ಎಲ್ಲರನ್ನು ಮನ ಬಂದಂತೆ ಥಳಿಸಿದ ಕ್ರೂರತನವನ್ನು ಮೆರೆದ ಸವರ್ಣೀಯರನ್ನು ತಕ್ಷಣ ಬಂಧಿಸಿ ಕೊಲೆಯಾದ ವ್ಯಕ್ತಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಸಿಓಡಿ ತನಿಖೆ ನಡೆಸಬೇಕು. ಹಾಗೂ ಕೊಲೆಯಾದ ಮುದಕಣ್ಣ ದೊರೆ ತಂದೆಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡಬೇಕು ಎಂದು ಅಖಿಲ ಭಾರತೀಯ ವಾಲ್ಮೀಕಿ ಸಮಾಜ ಸೇವಾ ಸಂಘಟನೆ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಬಟಗಿ ಆಗ್ರಹಿಸಿದ್ದಾರೆ.

ಕೊಲೆಗೆ ಮುನ್ನ ಪಿಎಸ್‌ಐ ಅವರ ಗಮನಕ್ಕೆ ಈ ವಿಷಯ ತಂದರೆ ಈ ಕುರಿತು ದಿವ್ಯ ನಿರ್ಲಕ್ಷ್ಯ ತೋರಿದ್ದಾರೆ ಎಂಬ ಆರೋಪ ಇದೆ. ಹಾಗಾಗಿ ಕಲಕೇರಿ ಪೊಲೀಸ್ ಠಾಣೆ ಪಿಎಸ್‌ಐ ಅವರನ್ನುಕೂಡಲೇ ಅಮಾನತ್ತುಗೊಳಿಸಬೇಕು. ಲೈಸನ್ಸ್ ಇಲ್ಲದೇ ಕಂಟ್ರಿ ಪಿಸ್ತೂಲ್‌ಗಳನ್ನು ತಗೆದುಕೊಂಡು ಜನರನ್ನು ಹೆದರಿಸುವುದು, ಕೊಲೆಗೈವುದರಿಂದ ಸಾರ್ವಜನಿಕರು ಭಯಭೀತಗೊಂಡಿದ್ದಾರೆ.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕೊಲೆಗಾರರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಪ್ರಕರಣವನ್ನು ಸಿಓಡಿ ತನಿಖೆಗೆ ಒಳಪಡಿಸಿ ಕೊಲೆಯಾದ ವ್ಯಕ್ತಿ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಒಂದು ವೇಳೆ ಅನ್ಯಾಯಕ್ಕೊಳಗಾದ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕು ಹಾಗೂ ಪಿಎಸ್‌ಐ ಅವರನ್ನು ಅಮಾನತ್ತುಗೊಳಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು.

# ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಸುಭಾಷ್ ಚಂದ್ರಬೋಸ್



ಭಾರತೀಯ ಸ್ವಾತಂತ್ರ್ಯಕ್ಕಾಗಿ ಅನೇಕ ಮಹನೀಯರು ಅನೇಕ ರೀತಿಯಲ್ಲಿ ಹೋರಾಟ ನಡೆಸಿ ಭಾರತಕ್ಕೆ ಸ್ವತಂತ್ರ ಒದಗಿಸಿ ಕೊಟ್ಟರು. ಭಗತ್ ಸಿಂಗ್, ಚಂದ್ರಶೇಖರ್ ಆಜಾದ್, ಮಹಾತ್ಮ ಗಾಂಧಿ, ಜವಾಹರ್ ಲಾಲ್ ನೆಹರು, ಸುಭಾಷ್ ಚಂದ್ರ ಬೋಸ್, ಲಾಲಾ ಲಜಪತ್ ರಾಯ್, ಬಾಲ ಗಂಗಾಧರ ತಿಲಕ್ ಮುಂತಾದವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾತ್ರವನ್ನು ವಹಿಸಿದ್ದರು. ಅವರಲ್ಲಿ ಸುಭಾಸ್ ಚಂದ್ರ ಬೋಸ್ ಅವರು ಮಹಾನ್ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅವರು ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಜಾಗತಿಕ ವೇದಿಕೆಯನ್ನು ಒದಗಿಸುವಲ್ಲಿ ಮತ್ತು ವಿಶ್ವ ಶಕ್ತಿಗಳ ಬೆಂಬಲವನ್ನು ಸಂಗ್ರಹಿಸುವಲ್ಲಿ ಅವರ ಕೊಡುಗೆಯನ್ನು ಎಂದಿಗೂ ಮರೆಯಲಾಗದು. ಅವರು ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲವನ್ನು ಸಂಗ್ರಹಿಸಲು ಅನೇಕ ವರ್ಷಗಳ ಕಾಲ ವಿಶ್ವದಾದ್ಯಂತ ಪ್ರವಾಸ ಮಾಡಿದರು.

ಸುಭಾಸ್ ಚಂದ್ರ ಬೋಸ್ ಅವರು ಮಹಾನ್ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅವರು ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಜಾಗತಿಕ ವೇದಿಕೆಯನ್ನು ಒದಗಿಸುವಲ್ಲಿ ಮತ್ತು ವಿಶ್ವ ಶಕ್ತಿಗಳ ಬೆಂಬಲವನ್ನು ಸಂಗ್ರಹಿಸುವಲ್ಲಿ ಅವರ ಕೊಡುಗೆಯನ್ನು ಎಂದಿಗೂ ಮರೆಯಲಾಗದು. ಅವರು ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲವನ್ನು ಸಂಗ್ರಹಿಸಲು ಅನೇಕ ವರ್ಷಗಳ ಕಾಲ ವಿಶ್ವದಾದ್ಯಂತ ಪ್ರವಾಸ ಮಾಡಿದರು.

**ಬಾಲ್ಯ ಜೀವನ :** ಬೋಸ್ ಒರಿಸ್ಸಾದ ಕಟಕ್‌ನಲ್ಲಿ ಜನವರಿ 23 ,1897 ರಂದು ಜನಿಸಿದರು. ಅವರ ತಂದೆ ಜಾಂಕಿನಾಥ್ ಬೋಸ್ ವಕೀಲರಾಗಿದ್ದರು ಮತ್ತು ಅವರ ತಾಯಿ ಪ್ರಭಾವತಿ ದತ್ ಬೋಸ್ ಗೃಹಿಣಿಯಾಗಿದ್ದರು. ಹದಿನಾಲ್ಕು ಒಡಹುಟ್ಟಿದವರಲ್ಲಿ ಒಂಬತ್ತನೆಯವರಾಗಿ ಜನಿಸಿದ ಬೋಸ್ ಅವರ ಬಾಲ್ಯವು ಆರಾಮದಾಯಕವಾಗಿತ್ತು, ಏಕೆಂದರೆ ಅವರ ತಂದೆ ಅವರ ಕುಟುಂಬವನ್ನು ನೋಡಿಕೊಳ್ಳಲು ಸಾಕಷ್ಟು ಸಂಪಾದಿಸಿದರು. ಬೋಸ್ ಉತ್ತಮ ವಿದ್ಯಾರ್ಥಿ ಮತ್ತು ರ್ಯಾಂಕ್ ಹೋಲ್ಡರ್ ಆಗಿದ್ದರು. ಅವರು ತಮ್ಮ ಶಾಲಾ ಶಿಕ್ಷಣವನ್ನು ಪ್ರತಿಷ್ಠಿತ ಶಾಲೆಗಳಾದ ಸ್ಟೀವರ್ಟ್ ಹೈಸ್ಕೂಲ್ ಮತ್ತು ರಾವೆನ್ಶಾ ಕಾಲೇಜಿಯೇಟ್ ಶಾಲೆಯಿಂದ ಮಾಡಿದರು. ಬೋಸ್ ಅವರು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಂಕ್ಷಿಪ್ತವಾಗಿ ಅಧ್ಯಯನ ಮಾಡಿದರು. ಅವರ ಭಾರತೀಯ ವಿರೋಧಿ ದೃಷ್ಟಿಕೋನಗಳು ಮತ್ತು ಭಾರತೀಯ ವಿದ್ಯಾರ್ಥಿಗಳನ್ನು ಅಮಾನುಷವಾಗಿ ನಡೆಸಿಕೊಂಡ ಪ್ರಾಧ್ಯಾಪಕರ ಮೇಲೆ ಹಲ್ಲೆ ನಡೆಸಿದ್ದಕ್ಕಾಗಿ ಅವರನ್ನು ಹೊರಹಾಕಲಾಯಿತು. ನಂತರ ಅವರು ಕಲ್ಕತ್ತಾಗೆ ಹೋಗಿ ಕಲ್ಕತ್ತಾ ವಿಶ್ವವಿದ್ಯಾಲಯದ ಅಡಿಯಲ್ಲಿ ಸ್ಕಾಟಿಷ್ ಚರ್ಚ್ ಕಾಲೇಜಿಗೆ ಸೇರಿದರು ಮತ್ತು 1918 ರಲ್ಲಿ ತತ್ವಶಾಸ್ತ್ರದಲ್ಲಿ ಪದವಿ ಪಡೆದರು.

**ಸ್ಫೂರ್ತಿ :** ಸುಭಾಷ್ ಚಂದ್ರ ಬೋಸ್ ಅವರಲ್ಲಿ ರಾಷ್ಟ್ರೀಯತೆಯ ಭಾವನೆಗಳು ಅವರ ಬಾಲ್ಯದಲ್ಲಿ ಕಾಣಿಸಿಕೊಳ್ಳಲು ಪ್ರಾರಂಭಿಸಿದವು. ಅವರು ಕೇವಲ 16 ವರ್ಷ ವಯಸ್ಸಿನವರಾಗಿದ್ದಾಗ ಸ್ವಾಮಿ ವಿವೇಕಾನಂದ ಮತ್ತು ಅವರ ಗುರು ರಾಮಕೃಷ್ಣ ಪರಮಹಂಸರ ಕೃತಿಗಳನ್ನು ಓದಿದ್ದರು. ಅವರ ಬರಹಗಳು ಮತ್ತು ಆಲೋಚನೆಗಳು ಅವರನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಭಾವಿಸಿದವು. ಅಧ್ಯಯನಕ್ಕಿಂತ ಧರ್ಮವೇ ಮುಖ್ಯ ಎಂದು ಅವರು ಭಾವಿಸಿದ್ದರು ಎಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ. ಚಿಕ್ಕ ವಯಸ್ಸಿನಲ್ಲೇ ಸುಭಾಸ್ ಚಂದ್ರ ಬೋಸ್ ಅವರ ಅಂತರಾಳದಲ್ಲಿ ರಾಷ್ಟ್ರೀಯತೆಯ ಉತ್ಸಾಹವು ಕುದಿಯಲು ಪ್ರಾರಂಭಿಸಿತು. ಅವರು 1900 ರ ದಶಕದ ಆರಂಭದಲ್ಲಿ ಕಲ್ಕತ್ತಾದಲ್ಲಿ ತಂಗಿದ್ದಾಗ ಬ್ರಿಟಿಷರಿಂದ ಭಾರತೀಯರ ಮೇಲಿನ ದಬ್ಬಾಳಿಕೆ ಮತ್ತು ಅವಮಾನಕ್ಕೆ ಸಾಕ್ಷಿಯಾದರು. ಬ್ರಿಟಿಷರ ಈ ಅವಮಾನಕರ ನಡವಳಿಕೆ ಕಂಡು ಮೊದಲನೆಯ ಮಹಾಯುದ್ಧದ ಆರಂಭದಲ್ಲಿ ಯುವ ಸುಭಾಷ್ ರವರ ಹೃದಯದಲ್ಲಿ ದೇಶಭಕ್ತಿಯು ಹೆಚ್ಚು ಆವರಿಸಿತ್ತು. ಕೆಲವು ಭಾರತೀಯ ವಿದ್ಯಾರ್ಥಿಗಳನ್ನು ಉದ್ದೇಶಪೂರ್ವಕವಾಗಿ ಅವಮಾನಿಸಿದ ಮತ್ತು ಅಮಾನುಷವಾಗಿ ನಡೆಸಿದ ಓಟೆನ್ ಎಂಬ ಅವರ ಪ್ರಾಧ್ಯಾಪಕರೊಂದಿಗಿನ ಭಿನ್ನಾಭಿಪ್ರಾಯಕ್ಕಾಗಿ ಬೋಸ್ ಅವರನ್ನು ಒಮ್ಮೆ ಕಾಲೇಜಿನಿಂದ ಹೊರಹಾಕಲಾಯಿತು.

**ನಾಜಿ ಜರ್ಮನಿಗೆ ಪಲಾಯನ :** ಸುಭಾಸ್ ಚಂದ್ರ ಬೋಸ್ ಅವರು ಲಾಭದಾಯಕ ಭಾರತೀಯ ನಾಗರಿಕ ಸೇವೆಗಳ ಹುದ್ದೆಗೆ ರಾಜೀನಾಮೆ ನೀಡಿದರು ಮತ್ತು ಸ್ವರಾಜ್ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಬಂಗಾಳ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಪ್ರಚಾರವನ್ನು ನೋಡಿಕೊಳ್ಳುವುದು ಅವರ ಮೊದಲ ಜವಾಬ್ದಾರಿಯಾಗಿತ್ತು. ತರುವಾಯ ಅವರು ಜನಪ್ರಿಯತೆಯನ್ನು ಗಳಿಸಿದರು ಮತ್ತು ಮಹಾತ್ಮ ಗಾಂಧಿಯವರೊಂದಿಗೆ ಸಂಬಂಧ ಹೊಂದಿದ್ದ ರಾಷ್ಟ್ರೀಯ ಖ್ಯಾತಿಯ ನಾಯಕರಾದರು. ಬೋಸ್ 1938ರಲ್ಲಿ ಬಹುಮತದೊಂದಿಗೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದರು. ಆದಾಗ್ಯೂ ಗಾಂಧಿ ಇದನ್ನು ಅನುಮೋದಿಸಲಿಲ್ಲ, ಇದು ಕಾಂಗ್ರೆಸ್ ನಲ್ಲಿ ವಿಭಜನೆಗೆ ಕಾರಣವಾಯಿತು. ಬೋಸ್ ಅವರು ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್ ಅನ್ನು ರಚಿಸಿದರು, ಇದು ತವರು ರಾಜ್ಯ ಬಂಗಾಳದಲ್ಲಿ ಪ್ರಬಲವಾಗಿತ್ತು. ಕಲ್ಕತ್ತಾದಲ್ಲಿ ಗೃಹಬಂಧನದಲ್ಲಿದ್ದಾಗ ಬೋಸ್ ರಾತ್ರಿಯ ವೇಳೆಯಲ್ಲಿ ಸಹಚರರ ಸಹಾಯದಿಂದ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಅವರು ಜರ್ಮನಿಗೆ ಹೋಗಿ ಹಿಟ್ಲರ್ ಅವರನ್ನು ಭೇಟಿ ಮಾಡಲು ಯೋಜಿಸಿದ್ದರು ಅದರಂತೆ ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಬೆಂಬಲ ಕೇಳಿದರು. ನೇತಜಿಯವರು ಜನವರಿ 16 ,1941 ರಂದು ಕಲ್ಕತ್ತಾದಿಂದ ಹೊರಟು ಪೇಶಾವರವನ್ನು ತಲುಪಿದರು. ಅಲ್ಲಿಂದ ಜನವರಿ 26 ರಂದು ಅವರು ರಷ್ಯಾಕ್ಕೆ ಪ್ರಯಾಣ ಬೆಳೆಸಿದರು ಮತ್ತು ಅಂತಿಮವಾಗಿ ಜರ್ಮನಿಯನ್ನು ತಲುಪಿದರು. ಅಲ್ಲಿ ಸುಮಾರು 4500 ಭಾರತೀಯ ಯುದ್ಧ ಕೈದಿಗಳನ್ನು ಒಳಗೊಂಡಿರುವ ಇಂಡಿಯನ್ ಲೀಜನ್ ಅನ್ನು ರಚಿಸಿದರು. 1942 ರಲ್ಲಿ ಹಿಟ್ಲರ್ ಅವರನ್ನು ಭೇಟಿಯಾದರು.

**ಆಜಾದ್ ಹಿಂದ್ ಫೌಜ್ ರಚನೆ :** ಬ್ರಿಟಿಷರ ವಿರುದ್ಧ ಜಪಾನಿನ ಪಡೆಗಳೊಂದಿಗೆ ಹೋರಾಡಲು ಜಪಾನ್‌ನಲ್ಲಿ ಆಜಾದ್ ಹಿಂದ್ ಫೌಜ್ ಅನ್ನು ರಚಿಸಲಾಯಿತು. ಬರ್ಮಾದಲ್ಲಿದ್ದಾಗ ಬೋಸ್ 'ನನಗೆ ರಕ್ತ ಕೊಡಿ ಮತ್ತು ನಾನು ನಿಮಗೆ ಸ್ವಾತಂತ್ರ್ಯವನ್ನು ನೀಡುತ್ತೇನೆ' ಎಂಬ ಘೋಷಣೆಯನ್ನು ನೀಡುವ ಮೂಲಕ ಆಜಾದ್ ಹಿಂದ್ ಫೌಜ್‌ಗೆ ಸೇರುವಂತೆ ಭಾರತೀಯರನ್ನು ಒತ್ತಾಯಿಸಿದರು. 1942ರಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪವನ್ನು ಸ್ವಾಧೀನ ಪಡಿಸಿಕೊಳ್ಳುವಲ್ಲಿ ಜಪಾನಿನ ಪಡೆಗಳು ಮತ್ತು ಆಜಾದ್ ಹಿಂದ್ ಫೌಜ್‌ನ ಒಕ್ಕೂಟವು ಯಶಸ್ವಿಯಾಯಿತು. ಆದಾಗ್ಯೂ ದ್ವೀಪವು ಜಪಾನಿನ ಪಡೆಗಳ ಸಂಪೂರ್ಣ ಸ್ವಾಧೀನದಲ್ಲಿ ಉಳಿಯಿತು. ಈ ಸೇನೆಯ ಸಹಾಯದಿಂದ ಅವರು ಭಾರತದ ಸ್ವಾತಂತ್ರ್ಯವನ್ನು ಗೆಲ್ಲಲು ಬಯಸಿದ್ದರು. ಸುಭಾಸ್ ಚಂದ್ರ ಬೋಸ್ ಅವರು ಹಿಟ್ಲರ್ ಅವರ ಸಹಾಯವನ್ನು ಕೇಳಲು ಒಮ್ಮೆ ಜರ್ಮನಿಗೆ ಹೋದರು ಮತ್ತು ಹಿಟ್ಲರ್ ಅವರಿಗೆ ಭರವಸೆ ನೀಡಿದ್ದರು. 'ನಿಮ್ಮ ರಕ್ತವನ್ನು ನನಗೆ ಕೊಡಿ ಮತ್ತು ನಾನು ನಿಮಗೆ ಸ್ವಾತಂತ್ರ್ಯವನ್ನು ನೀಡುತ್ತೇನೆ' ಎಂಬ ಪ್ರಸಿದ್ಧ ಸಾಲನ್ನು ಭಾರತದ ಜನರಿಗೆ ಬೋಸ್ ಉಚ್ಚರಿಸಿದರು. ಬ್ರಿಟಿಷರ ವಿರುದ್ಧ ಜಪಾನಿನ ಪಡೆಗಳೊಂದಿಗೆ ಹೋರಾಡಿದರು ಆದರೆ ಜಪಾನ್ ಶರಣಾದಾಗ ಬೋಸ್ ಟೋಕಿಯೊಗೆ ಹೋಗಿ ತಪ್ಪಿಸಿಕೊಳ್ಳಬೇಕಾಯಿತು. ಅವರು 1945ರಲ್ಲಿ ವಿಮಾನ ಅಪಘಾತದಲ್ಲಿ ನಿಧನರಾದರು ಎಂದು ನಂಬಲಾಗಿದೆ. "

ಸುಭಾಸ್ ಚಂದ್ರ ಬೋಸ್ ಭಾರತದ ನೆಲದಲ್ಲಿ ಜನಿಸಿದ ಅಸಾಮಾನ್ಯ ಸ್ವಾತಂತ್ರ್ಯ ಹೋರಾಟಗಾರ. ಅವರ ಅಚಲವಾದ ಆತ್ಮವಿಶ್ವಾಸ ಮತ್ತು ಧಿಕ್ಕರಿಸುವ ದೇಶಭಕ್ತಿ ಅವರನ್ನು ಇತರ ಸ್ವಾತಂತ್ರ್ಯ ಹೋರಾಟಗಾರರ ಗುಂಪಿನಿಂದ ಪ್ರತ್ಯೇಕಿಸಿತು. ಈ ನಿಟ್ಟಿನಲ್ಲಿ ಅವರ ಕೊಡುಗೆ ಮತ್ತು ಪ್ರಯತ್ನಗಳನ್ನು ಎಂದಿಗೂ ಮರೆಯಲಾಗದು.

**ಲೇಖನ :**
**ಸಿದ್ಧಲಿಂಗ ಶಿವಯೋಗಿ ಮಠಪತಿ ಸ್ವಾಮಿ**
**ಉಚ್ಚ ತಾ. ಭಾಲ್ಕಿ ಜಿ. ಬೀದರ್**
**9241978575**

# ಭಾರತದ ಮೊದಲ ಮುಸ್ಲಿಂ ಶಿಕ್ಷಕಿ ಫಾತೀಮಾ ಶೇಕ್ ಅವರ ಜನ್ಮ ದಿನಾಚರಣೆಯ ಶುಭಾಶಯಗಳು

# ಅಕ್ಷರದ ಬೆಳಕಿಗಾಗಿ ಉರಿದ ಸಾಲು ದೀಪಗಳಲ್ಲಿ ಫಾತೀಮಾಶೇಕ್ ಎಂಬ ದೀಪವೂ ಇದೆ

ಕೆಳಜಾತಿಗಳಿಗೆ ಅಕ್ಷರ ಕಲಿಸುವುದು ಧರ್ಮವಿರೋಧಿ ಎಂದು ಮೇಲ್ಜಾತಿಗಳು ವ್ಯಾಪಾರಿ ಗೋವಿಂದರಾವ್ ಜತೆ ಜಗಳ ತೆಗೆದಿದ್ದಾರೆ. ಇದರಿಂದಾಗಿ ಮಗ ಜ್ಯೋತಿಬಾ ಸೊಸೆ ಸಾವಿತ್ರಿಬಾಯಿ ಅವರು ಅಕ್ಷರ ಕಲಿಸುವುದನ್ನು ನಿಲ್ಲಿಸದ್ದಕ್ಕೆ ಉಟ್ಟ ಬಟ್ಟೆಯಲ್ಲಿಯೇ ಮನೆಯಿಂದ ಹೊರಹಾಕುತ್ತಾರೆ. ಗೋವಿಂದರಾವ್ ತಂಗಿ ಸುಗುಣಬಾಯಿ ಪರ್ಷಿಯನ್ ಶಿಕ್ಷಕ ಮುನ್ಷಿ ಗಫರ್ ಖಾನ್ ಅವರ ಬಳಿ ವಿಷಯ ತಿಳಿಸುತ್ತಾಳೆ. ಗಫರ್ ಖಾನ್ ಫುಲೆ ದಂಪತಿಗಳನ್ನು ಉಸ್ಮಾನ್ ಶೇಕ್ ಅವರ ಮನೆಗೆ ಕರೆದೊಯ್ಯುತ್ತಾರೆ. ನಡೆದ ಘಟನೆಯನ್ನು ವಿವರಿಸುತ್ತಾರೆ. ಉಸ್ಮಾನ್ ಶೇಕ್ ತನ್ನ ಮನೆಯ ಎರಡು ಕೋಣೆಗಳನ್ನು ಬಿಟ್ಟುಕೊಡುತ್ತಾರೆ. ಮನೆಯ ಒಳಗಿಂದ ಒಂದು ಹುಡುಗಿ ಬಂದು ಸಾವಿತ್ರಿಬಾಯಿಯನ್ನು ಪರಿಚಯ ಮಾಡಿಕೊಳ್ಳುತ್ತಾಳೆ. ಆ ಹುಡುಗಿಯೇ ಉಸ್ಮಾನ್ ಶೇಕ್ ಅವರ ತಂಗಿ ಫಾತೀಮಾ ಶೇಕ್.


ಉಸ್ಮಾನ್ ಶೇಕ್ ಅವರ ಮನೆಯಲ್ಲಿ ಫುಲೆ ದಂಪತಿಗಳಿಂದ (1848) ಶಾಲೆಯೊಂದು ಆರಂಭವಾಗುತ್ತದೆ. ಇದೇ ಶಾಲೆಯಲ್ಲಿ ಸಾವಿತ್ರಿಬಾಯಿ ಮತ್ತು ಫಾತೀಮಾ ಶಿಕ್ಷಕಿಂ-ಯರಾಗುತ್ತಾರೆ. ಆದರೆ ಸಾವಿತ್ರಿಬಾಯಿ ಅವರನ್ನು ಜನವರಿ 3 ರಂದು ದೇಶವ್ಯಾಪಿ ನೆನೆದು ಫುಲೆ ದಂಪತಿಗಳ ಅಕ್ಷರಕ್ರಾಂತಿಯ ಭಾಗವಾಗಿದ್ದ ಫಾತೀಮಾ ಶೇಕ್ ಹುಟ್ಟಿದ ಜನವರಿ 9 ನ್ನು ಚಾರಿತ್ರಿಕವಾಗಿ ನೆನೆಯುವುದಿಲ್ಲ.

ಹಾಗೆ ನೋಡಿದರೆ, ಫುಲೆ ದಂಪತಿಗಳ ಜತೆ ಮುನ್ಷಿ ಗಫರ್ ಖಾನ್, ಸುಗುಣಬಾಯಿ, ಉಸ್ಮಾನ್ ಶೇಖ್, ಮತ್ತು ಫಾತೀಮಾ ಶೇಖ್ ಆಧುನಿಕ ಭಾರತದಲ್ಲಿ ದಮನಿತರಿಗೆ ಅಕ್ಷರದ ಬೆಳಕು ಬೀರಲು ಸಾಲುದೀಪದಂತೆ ಉರಿದವರು. ಹಾಗಾಗಿ ಈ ಕಾರ್ಯಾಚರಣೆಯ ಭಾಗವಾದ ಎಲ್ಲರನ್ನೂ ನೆನೆಯಬೇಕಿದೆ. ಈ ಶಿಕ್ಷಣ ಕ್ರಾಂತಿಗೆ 'ದಲಿತ-ದಮನಿತ-ಮಹಿಳೆ-ಮುಸ್ಲೀಂ' ಸಂಯುಕ್ತ ಅರಿವಿನ ಹೋರಾಟದ ಒಂದು ದೊಡ್ಡ ಮಾದರಿಯನ್ನು ಈ ಮೂಲಕ ತೋರಿಸಿದ್ದಾರೆ.

ಸೂಸಿ ತಾರು ಮತ್ತು ಲಲಿತ ಕೆ ಅವರು 1991 ರಲ್ಲಿ ಸಂಪಾದಿಸಿದ 'ವುಮನ್ ರೈಟಿಂಗ್ ಇನ್ ಇಂಡಿಯಾ' ಮೊದಲ ಸಂಪುಟದಲ್ಲಿ ಸಾವಿತ್ರಿಬಾಯಿ 1956 ರಲ್ಲಿ ಬರೆದ ಪತ್ರವೊಂದು ಪ್ರಕಟವಾಗುತ್ತದೆ. ಈ ಪತ್ರದಲ್ಲಿ ಫಾತೀಮಾ ಶೇಕ್ ಅವರ ಉಲ್ಲೇಖ ಗಮನ ಸೆಳೆಯುತ್ತದೆ. ನಂತರ ಫಾತೀಮಾಳ ಬಗ್ಗೆ ಕುತೂಹಲ ಮೂಡುತ್ತದೆ. 1831 ರ ಜನವರಿ 9 ರಂದು ಫಾತೀಮಾ ಶೇಕ್ ಪುಣೆಯಲ್ಲಿ ಜನಿಸುತ್ತಾಳೆ. ಅಣ್ಣ ಉಸ್ಮಾನ್ ಶೇಕ್ ಜತೆ ಪುಣೆಯ ಭಿಡೆವಾಡೆಯಲ್ಲಿ ಬೆಳೆಯುತ್ತಾಳೆ. ಉಸ್ಮಾನ್ ತಂಗಿಗೆ ಉರ್ದು ಶಿಕ್ಷಣ ಕೊಡಿಸುತ್ತಾರೆ. ಮುಸ್ಲೀಮರ ವಿರೋಧದ ನಡುವೆಯೂ ಫಾತಿಮಾಗೆ ಮರಾಠಿ ಶಿಕ್ಷಣ ಕೊಡಿಸುತ್ತಾರೆ. ಹಾಗಾಗಿ ಮರಾಠಿ ಕಲಿತ ಮೊದಲ ಮುಸ್ಲಿಂ ಮಹಿಳೆ.

ಅಮೇರಿಕಾದ ಮರಾಠಿ ಮಿಷನರಿಯಾಗಿ ಭಾರತಕ್ಕೆ ಬಂದ ಸಿಂಥಿಯಾ ಫೆರಾರ್ 1829 ರಲ್ಲಿ ಅಹಮದಾಬಾದಲ್ಲಿ ನಾಲ್ಕು ಹುಡುಗಿಯರ ಶಾಲೆ ತೆರೆಯುತ್ತಾಳೆ. 1848 ರಲ್ಲಿ ಜ್ಯೋತಿಬಾಫುಲೆ ಈ ಶಾಲೆಗಳನ್ನು ನೋಡಿ ಹುಡುಗಿಯರಿಗಾಗಿ ಶಾಲೆ ತೆರೆಯುವ ಪ್ರೇರಣೆ ಪಡೆಯುತ್ತಾರೆ. ಸಿಂಥಿಯಾ ಹುಡುಗಿಯರ ಶಾಲೆಗಳಲ್ಲಿ ಟೀಚರ್ ಆಗಿ ಕೆಲಸಮಾಡಲು ಬೇಕಿದ್ದ ತರಬೇತಿ ಶಾಲೆಯನ್ನು ಅಹಮದ್ ನಗರದಲ್ಲಿ ತೆರೆಯುತ್ತಾರೆ.

ಈ ಟೀಚರ್ ಟ್ರೈನಿಂಗ್ ಸ್ಕೂಲಿನ ಮೊದಲ ಬ್ಯಾಚಿನ ವಿದ್ಯಾರ್ಥಿನಿಯರಾಗಿ ಸಾವಿತ್ರಿಬಾಯಿ ಫುಲೆ ಮತ್ತು ಫಾತೀಮಾ ಶೇಕ್ ಸೇರುತ್ತಾರೆ. ಇಬ್ಬರೂ ಸಿಂಥಿಯಾ ಅವರ ನೇರ ಶಿಷ್ಯೆಯರಾಗುತ್ತಾರೆ. ಹೀಗೆ ಜ್ಯೋತಿ-ರಾವ ಫುಲೆ, ಸಾವಿತ್ರಿಬಾಯಿ, ಫಾತೀಮಾ ಶೇಕ್ ಅವರಲ್ಲಿ ಹುಡುಗಿಯರ ಶಾಲೆಯ ಕನಸಿನ ಬೀಜ ಬಿತ್ತಿದ್ದು ಸಿಂಥಿಯಾ ಫೆರಾರ್ ಎನ್ನುವುದನ್ನು ಮರೆಯುವಂತಿಲ್ಲ.




ಸಾವಿತ್ರಿಬಾಯಿ ಶಾಲೆಗಳಲ್ಲಿ ಕಲಿಸುತ್ತಿದ್ದರೆ ಫಾತೀಮಾ ಮನೆ ಮನೆಗೆ ತೆರಳಿ ಶಿಕ್ಷಣದ ಮಹತ್ವವನ್ನು ತಿಳಿಸಿ ಮಕ್ಕಳನ್ನು ಶಾಲೆಗೆ ಕರೆತರುತ್ತಿದ್ದಳು. ಮುಸ್ಲಿಂ ಬಾಲಕಿಂ-ಯರನ್ನು ಶಾಲೆಗೆ ಪ್ರೇರೇಪಿಸಿದ್ದಕ್ಕೆ ಮುಸ್ಲೀಂ ಗಂಡಸರಿಂದ ಕಷ್ಟಗಳನ್ನು ಎದುರಿಸುತ್ತಾಳೆ. ಮುಂದೆ ಮಹಿಳೆಯರಿಗಾಗಿ ಫುಲೆ ದಂಪತಿಗಳು ಆರಂಭಿಸಿದ ಹದಿನೆಂಟು ಶಾಲೆಗಳ ವ್ಯವಹಾರವನ್ನು ನಿರ್ವಹಿಸಿದಳು. ಮುಂಬೈನಲ್ಲಿ 1851 ರಲ್ಲಿ ಸ್ವತಃ ಹುಡುಗಿಯ-ರಿಗಾಗಿ ಎರಡು ಶಾಲೆಗಳನ್ನು ತೆರೆದಳು. ಫುಲೆ ದಂಪತಿಗಳಂತೆ ಫಾತೀಮಾ ಸಾಹಿತ್ಯ ರಚಿಸದಿದ್ದ ಕಾರಣ ಬಹುಕಾಲ ತೆರೆಮರೆಯಲ್ಲೇ ಉಳಿದರು.

ಅಂಬೇಡ್ಕರ್ 1946 ರಲ್ಲಿ 'ಶೂದ್ರರು ಯಾರಾಗಿದ್ದರು? ಕೃತಿಯನ್ನು ಜೋತಿಬಾ ಪುಲೆ ಅವರಿಗೆ ಅರ್ಪಿಸಿ ಅವರು ನನ್ನ ಗುರು ಎನ್ನುತ್ತಾರೆ. ಹೀಗಾಗಿ ಅಂಬೇಡ್ಕರ್ ಕುರಿತ ಅಧ್ಯಯನದ ಜತೆಜತೆಗೆ ದಲಿತ-ಬಹುಜನ ಪಕ್ಷವು ಜ್ಯೋತಿಬಾ ಮತ್ತು ಸಾವಿತ್ರಿಬಾಯಿ ಅವರನ್ನು ಮುನ್ನಲೆಗೆ ತಂದಿತು. ಭಾರತದಲ್ಲಿ ಮುಸ್ಲಿಂ ಚಿಂತಕರು ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ಸ್ಥಾಪನೆಗೆ ಕಾರಣರಾದ ಸರ್ ಸೈಯದ್ ಅಹ್ಮದ್ ಖಾನ್ ಮೂಲಕ ಆಧುನಿಕ ಭಾರತದ ಮುಸ್ಲಿಂ ಶಿಕ್ಷಣವನ್ನು ಗುರುತಿಸುತ್ತಾರೆ. ವಿರ್ಯಾಸವೆಂದರೆ, 1848 ರಲ್ಲಿಯೇ ಶಿಕ್ಷಕಿಯಾಗಿ ಅಕ್ಷರದ ಬೆಳಕಿಂಡಿ ತೆರೆದ ಫಾತೀಮಾ ಶೇಕ್ ಬಗ್ಗೆ ಮುಸ್ಲಿಂ ಚಿಂತಕರು ಚರಿತ್ರೆಯಲ್ಲಿ ಗುರುತಿಸುವುದಿಲ್ಲ.

ಸಾವಿತ್ರಿಬಾಯಿ ಪುಲೆ ಮತ್ತು ಫಾತೀಮಾ ಶೇಕ್ ಕುರ್ಚಿಯ ಮೇಲೆ ಕುಳಿತಿದ್ದು, ಕೆಳಗಡೆ ಇಬ್ಬರು ಮಕ್ಕಳು, ಹಿಂದೆ ಒಬ್ಬ ಮಹಿಳೆ ನಿಂತಿರುವ ಒಂದು ಬಹಳ ಹಳೆಯ ಫೋಟೋವನ್ನು ಲೋಕಂಡೆ ಎನ್ನುವ ಬ್ರಿಟಿಷ್ ಮಿಷನರಿ ತನ್ನ ಪುಸ್ತಕದಲ್ಲಿ ಪ್ರಕಟಿಸುತ್ತಾನೆ. 1924 ರಲ್ಲಿ ಆರ್. ಎನ್.ಲಾಡ್ ಎನ್ನುವವರು ಸಂಪಾದಕರಾಗಿ ಪ್ರಕಟಿಸುತ್ತಿದ್ದ "ಮಜೂರ್" ಎನ್ನುವ ಪತ್ರಿಕೆಯಲ್ಲಿ ಈ ಫೋಟೋವನ್ನು ಮುದ್ರಿಸಿ ಸಂಕ್ಷಿಪ್ತ ಪರಿಚಯ ಬರೆಯುತ್ತಾರೆ. ಮುಂದೆ ಈ ಫೋಟೋವನ್ನು ಡಾ.ಎಂ.ಜಿ.ಮಾಲಿ ಅವರ ''ಸಾವಿತ್ರಿಬಾ ಪುಲೆ ಸಮಗ್ರ ವಾಙ್ಮಯ' ಎನ್ನುವ ಕೃತಿಯಲ್ಲಿ ಪ್ರಕಟಿಸುತ್ತಾರೆ. ಇದರ ರೆಫರೆನ್ಸ್ ನಿಂದ 2020 ರಲ್ಲಿ ಬಿಬಿಸಿಯ ಹಿಂದಿ ಚಾನಲ್ ನಲ್ಲಿ ಪತ್ರಕರ್ತ ನಾಜಿರುದ್ದೀನ್ ಅವರು "ಫಾತೀಮಾ ಶೇಕ್-ಸಾವಿತ್ರಿಬಾಯಿ ಕೆ ಸಾತ್ ವಂಚಿತೋಂಕೋ ಶಿಕ್ಷಿತ್ ಕರ್ನೆ ವಾಲಿ ಮಹಿಳಾ" ಎಂಬ ಕಾರ್ಯಕ್ರಮ ಪ್ರಸಾರ ಮಾಡಿ ಈ ಫೋಟೋದ ಚಾರಿತ್ರಿಕತೆ ಕುರಿತು ಚರ್ಚಿಸುತ್ತಾರೆ. ಆಗ ಈ ಫೋಟೋ ಹೆಚ್ಚು ಜನಪ್ರಿಯವಾಗುತ್ತದೆ.

ಹೀಗೆ ಮುನ್ನಲೆಗೆ ಬಂದು ಪರಿಚಯವಾದ ಫಾತೀಮಾ ಶೇಕ್ ಅವರ ಪರಿಚಯವನ್ನು 2016 ರಲ್ಲಿ ಮಹಾರಾಷ್ಟ್ರದ ಬಾಲಭಾರತಿಯ ಉರ್ದು ಪಠ್ಯದಲ್ಲಿಯೂ, 2022 ರಲ್ಲಿ ಆಂಧ್ರದ 8 ನೇ ತರಗತಿಯ ಪಠ್ಯದಲ್ಲಿಯೂ ಸೇರಿಸಲಾಗಿದೆ. 2022 ರಲ್ಲಿ ಫಾತಿಮಾಳ 191 ನೇ ಜನ್ಮದಿನಾಚರಣೆಗೆ ಗೂಗಲ್ ಡೂಡಲ್ ಮೂಲಕ ಗೌರವಿಸಿ ಗಮನಸೆಳೆಯಿತು. ಸೈಯದ್ ನಸೀರ್ ಅಹಮದ್ ಅವರು ತೆಲುಗಿನಲ್ಲಿ ಬರೆದ ಫಾತೀಮಾ ಶೇಕ್ ಜೀವನ ಚರಿತ್ರೆಯ ಕೃತಿಯನ್ನು ಲೇಖಕ ಕಾ.ಹು.ಚಾನ್ ಪಾಷ ಅವರು ಕನ್ನಡಕ್ಕೂ ತಂದಿದ್ದಾರೆ.

ಭಾರತದ ಚರಿತ್ರೆಯಲ್ಲಿ ಮರೆಯಬಾರದ ಫಾತೀಮಾ ಶೇಕ್ ಅವರನ್ನು ಇನ್ನಾದರೂ ನೆನೆಯೋಣ.

। ಅರುಣ್ ಜೋಳದ
ಕೂಡ್ಲಿಗಿ

## ರನ್ನವೈಭವ ಪೂರ್ವಭಾವಿ ಸಾರ್ವಜನಿಕ ಸಭೆ

## ರನ್ನವೈಭವ ಅದ್ದೂರಿ ಆಚರಣೆಗೆ ಎಲ್ಲರ ಸಹಕಾರ ಅಗತ್ಯ: ಎನ್.ಎ. ಲಮಾಣಿ

**ಮಹಾಲಿಂಗಪುರ** : 2025ರ ರನ್ನ ವೈಭವದ ಪ್ರಥಮ ದಿನದ ಕಾರ್ಯಕ್ರಮವು ಫೆ.22ರಂದು ರನ್ನಬೆಳಗಲಿ ಪಟ್ಟಣದಲ್ಲಿ ನಡೆಯುತ್ತಿರುವದು ಅಭಿಮಾನದ ಸಂಗತಿ. ರನ್ನವೈಭವ ಕಾರ್ಯಕ್ರಮ ಯಶಸ್ವಿಗೆ ಪಟ್ಟಣದ ಸಮಸ್ತ ಸಾರ್ವಜನಿಕರು, ಜನಪ್ರತಿನಿಧಿಗಳು, ಪಟ್ಟಣದ ಹಿರಿಯರು ಪಕ್ಷಾತೀತ, ಜಾತ್ಯಾತೀತವಾಗಿ ಸಹಕಾರ ನೀಡಿ, ಶ್ರಮಿಸಬೇಕು ಎಂದು ರನ್ನಬೆಳಗಲಿ ಪಪಂ ಮುಖ್ಯಾಧಿಕಾರಿ ಎನ್.ಎ.ಲಮಾಣಿ ಹೇಳಿದರು.

ಸಮೀಪದ ರನ್ನಬೆಳಗಲಿ ಪಟ್ಟಣದ ಬಂದಲಕ್ಷ್ಮೀ ದೇವಸ್ಥಾನದ ಆವರಣದಲ್ಲಿ ಬುಧವಾರ ಜರುಗಿದ ರನ್ನ ವೈಭವದ ಪೂರ್ವಭಾವಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಸರ್ಕಾರದ ಸಮಿತಿಗಳ ಜೊತೆಗೆ ಪಟ್ಟಣದ ಸಾರ್ವಜನಿಕರು, ಮುಖಂಡರನ್ನು ಒಳಗೊಂಡ ಉಪ ಸಮಿತಿಗಳನ್ನು ರಚಿಸಿ, ರನ್ನ ವೈಭವ ಕಾರ್ಯಕ್ರಮವನ್ನು ಊರ ಹಬ್ಬದಂತೆ ಅಭಿಮಾನದಿಂದ ಸರ್ವರೂ ಶ್ರಮವಹಿಸಿ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸೋಣ ಎಂದರು.



ಪಟ್ಟಣದ ಹಿರಿಯರಾದ ನ್ಯಾಯವಾದಿ ಶಿವನಗೌಡ ಪಾಟೀಲ, ಧರೆಪ್ಪ ಸಾಂಗ್ಲೀಕರ, ಹಿಂದೂ ಸಂಘಟನೆಯ ಗುಂಜಿಗಾಂವಿ, ಯೋಗ ಶಿಕ್ಷಕ ರಾಘವೇಂದ್ರ ನೀಲನ್ನವರ ಮಾತನಾಡಿದರು.

ಸಮಿತಿಗಳ ರಚನೆಗೆ ಒಪ್ಪಿಗೆ :
ರನ್ನಬೆಳಗಲಿ ಪಟ್ಟಣದಲ್ಲಿ ರನ್ನವೈಭವದ ಪ್ರಥಮ ದಿನ ಫೆ.22ರಂದು ರನ್ನ ರಥದ ಮೆರವಣಿಗೆ, ವಿವಿಧ ಕಲಾ ಪ್ರಕಾರಗಳ ಕಲಾ ಪ್ರದರ್ಶ, ಭವ್ಯ ವೇದಿಕೆ ರನ್ನ ಉತ್ಸವ ಉದ್ಘಾಟನಾ ಸಮಾರಂಭ, ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳ ಯಶಸ್ವಿಗಾಗಿ ವಿವಿಧ ಸಮಿತಿಗಳ ರಚನೆಯ ಕುರಿತು ಪಟ್ಟಣದ ಸಮಸ್ತ ಸಾರ್ವಜನಿಕರ ಅನಿಸಿಕೆ, ವಿವಿಧ ಸಂಘಟನೆಗಳು, ಕಲಾವಿದರ ಸಂಘ, ಆಡಳಿತ ಮಂಡಳಿ, ಪಟ್ಟಣ ಪಂಚಾಯತ್ ಕಾರ್ಯಾಲಯದ ಅಧಿಕಾರಿ ವೃಂದ, ಜನಪ್ರತಿನಿಧಿಗಳ ಜೊತೆಗೆ ಚರ್ಚೆ ನಡೆಸಿ ರನ್ನ ವೈಭವ ಅದ್ದೂರಿ ಆಚರಣೆಗೆ ಹಲವು ಸಮಿತಿಗಳ ರಚನೆಗೆ ಒಪ್ಪಿಗೆ ನೀಡಲಾಯಿತು.

ರನ್ನ ವೈಭವ ಪೂರ್ವಭಾವಿ ಸಭೆಯಲ್ಲಿ ಗ್ರಾಮ ಆಡಳಿತಾಧಿಕಾರಿ ಬಿ.ಎಂ.ಪಾಟೀಲ, ಪಟ್ಟಣ ಪಂಚಾಯತಿ ಸರ್ವ ಸದಸ್ಯರು, ಕಲಾವಿದರು, ವಿವಿಧ ಸಮಾಜಗಳ ಗುರಯು ಹಿರಿಯರು, ಯುವಕರು ಇದ್ದರು.

## ಪೌಷ್ಟಿಕ ಆಹಾರ ಶಿಬಿರ ಜಾಗೃತಿ

**ಬಾಗಲಕೋಟ** : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟ, ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ,ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹಯೋಗದಲ್ಲಿ ಹೊನ್ನಾಕಟ್ಟಿಗ್ರಾಮದಅಂಗನವಾಡಿಕೇಂದ್ರದಲ್ಲಿ ಗ್ರಾಮ ಆರೋಗ್ಯ ನೈರ್ಮಲ್ಯ ಸಮೀತಿ ವತಿಯಿಂದ "ಪೌಷ್ಟಿಕ ಆಹಾರ ಶಿಬಿರ" ಜಾಗೃತಿ ಆಯೋಜಿಸಲಾಗಿತ್ತು. ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಾದ, ಎಸ್ ಎಚ್ ಬೀರಣ್ಣವರ ಹಿರಿಯರಾದ,ವೆಂಕಪ್ಪ ತಳವಾರ ಆರೋಗ್ಯ ನೀರೀಕ್ಷಣಾಧಿಕಾರಿ, ಎಸ್ ಎಸ್ ಅಂಗಡಿ ಅಂಬವ್ವ ಸೂರ್ಯವಂಶಿ, ಬಸವ್ವ ಪೂಜಾರಿ ಉತ್ತಮ ಆರೋಗ್ಯಕ್ಕಾಗಿ ಪೋಷಕಾಂಶಯುಕ್ತ ಆಹಾರ ಮಾಹಿತಿ ಕಿರು ಪುಸ್ತಕ ಬಿಡುಗಡೆ ಮಾಡುವ ಮುಖಾಂತರ ಗ್ರಾಮ ಆರೋಗ್ಯ ನೈರ್ಮಲ್ಯ ಸಮೀತಿ ಆಹಾರ ಶಿಬಿರದ ಚಾಲನೆ ನೀಡಿದರು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್ ಎಸ್ ಅಂಗಡಿಯವರು, ಪೋಷಕಾಂಶಕೊರತೆಯಿಂದಬಾಣಂತಿಯರು ಗರ್ಭಿಣಿಯರು ಕೊರತೆಯಿಂದ ಅಶಕ್ತತೆ ರೋಗನಿರೋಧಕ ಶಕ್ತಿ ಕುಂದುತ್ತದೆ ಮಕ್ಕಳಲ್ಲಿ ಬೆಳವಣಿಗೆ ಸರಿಯಾಗಿ ಆಗುವದಿಲ್ಲ ಆದ-ನಿಕ ಜೀವನ ಶೈಲಿಯಿಂದ ಮಧುಮೇಹ, ರಕ್ತದೊತ್ತಡ ಆವರಿಸುತ್ತವೆ. "ಆರೋಗ್ಯವಂತ



ತಾಯಿ ಆರೋಗ್ಯವಂತ ಮಗು " ಅಂಗನವಾಡಿ ಕೇಂದ್ರದಲ್ಲಿ ವಿತರಿಸುವ ಬೇಳೆ ಕಾಳು, ಹಾಲಿನ ಪೌಡರ ' ಸಾಂಬರ ಪದಾರ್ಥ, ಮಿಲೆಟ್ ಲಡ್ಡು, ತತ್ತಿ ಬಾಣಂತಿಯರು ಗರ್ಭಿಣಿಯರು ತಪ್ಪದೇ ಸೇವಿಸಬೇಕು.

ಸಮತೋಲನ ಆಹಾರ ಸೇವಿಸಿ ಆರೋಗ್ಯವಂತ ಜೀವನ ಸಾಗಿಸಿ, ವಯಕ್ತಿಕ ಸ್ವಚ್ಛತೆ, ಸೊಳ್ಳೆ ಗಳ ಕಡಿತ ತಪ್ಪಿಸಿಕೊಳ್ಳಿ ಲಾರ್ವಾ ಉತ್ಪತ್ತಿ ತಾಣಗಳು ಬೆಳೆಯದಂತು ಜಾಗೃತಿ ವಹಿಸಬೇಕು. ಆರೋಗ್ಯ ಇಲಾಖೆಯ, ಮಹಿಳಾ ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಸವಲತ್ತುಗಳನ್ನು ಸದುಪಪಡಿಸಿಕೊಳ್ಳಬೇಕು. ಪೌಷ್ಠಿಕ ಆಹಾರ ಸೇವಿಸಿ ಆರೋಗ್ಯಕರ ಜೀವನ ಸಾಗಿಸಿ ಸಾಂಕ್ರಾಮಿಕ ರೋಗಗಳ ಹರಡದಂತೆ ಮುಂಜಾಗ್ರತೆ ಕ್ರಮಗಳನ್ನು ಪಾಲಸಿಬೇಕು ಎಂದರು. ಶಾಲಾ ಮುಖ್ಯ ಶಿಕ್ಷಕರಾದ ಎಸ್ ಎಚ್ ಬೀರಣ್ಣವರ ಸರಕಾರದ ಸವಲತ್ತುಗಳನ್ನು ಸದುಪಯೋಗ ಪಡಿಸಿಕೊಂಡು ಮಕ್ಕಳನ್ನು ಸರಕಾರಿ ಶಾಲೆಯಲ್ಲಿಯೇ ಓದಿಸಿರಿಎಂದರು.

ಅಂಗನವಾಡಿ ಕಾರ್ಯಕರ್ತೆ ಸುಜಾತಾ ಎಸ್ ನೆಲವಡೆ, ಬಾಲ್ಯ ವಿವಾಹ ಯಾರು ಮಾಡಬಾರದುಬಾಲ್ಯವಿವಾಹಮಾಡುವವರಿಗೆ ಕಾನೂನು ಕಠಿಣ ಶಿಕ್ಷೆ ಇರುತ್ತದೆ. "ಹೆಣ್ಣು ಜಗದ ಕಣ್ಣು ಹೆಣ್ಣು ಮಗುವನ್ನು ಪೋಷಿಸಿರಿ ಓದಿಸಿರಿ" ಬಾಲ್ಯವಿವಾಹ ಕಾನೂನ ಬಾಹಿರವಾಗುತ್ತದೆ. ಎಂದು ಮಾಹಿತಿ ನೀಡಿದರು.ಗ್ರಾಆರೋಗ್ಯ ನೈರ್ಮಲ್ಯ ಸಮೀತಿ ಪೌಷ್ಟಿಕ ಆಹಾರ ಶಿಬಿರದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು. ಗ್ರಾಮ ಮುಖಂಡರು, ಗರ್ಭಿಣಿಯರು, ತಾಯಿಂದಿರು ಮುದ್ದು ಮಕ್ಕಳು ಭಾಗವಹಿಸಿದ್ದರು.

## ಕಳಪೆ ಮಟ್ಟದ ಜೇಜೀಮ್ ಕಾಮಗಾರಿ ಕಣ್ಮುಚ್ಚಿ ಕುಳಿದ ತಾಲೂಕು ಅಧಿಕಾರಿಗಳು

**ಝಳಕಿ** : ಝಳಕಿ ಗ್ರಾಮದ ಜೆ.ಜೆ.ಎಮ್ ಕಾಮಗಾರಿ ಸಂಪೂರ್ಣ ಕಳಪೆ ಮಟ್ಟದ್ದಾಗಿದ್ದು ಇದನ್ನು ಇಂಡಿ ತಾಲೂಕು ಅಧಿಕಾರಿ ರುದ್ರವಾಡಿ ಇವರಿಗೆ ತಿಳಿಸಿದರು ಕಣ್ಣು ಮುಚ್ಚಿ ಕಾಮಗಾರಿ ಹಣ ಬಿಡುಗಡೆ. ಮಾಡಿರುವುದು ಯಾವ ಪುರುಷಾರ್ಥಕ್ಕೆ ತಿಳಿಯದಂತಾಗಿದೆ ಎಂದು ಝಳಕಿ ಗ್ರಾಮದ ಇಂಡಿ ತಾಲೂಕಾ ಕರ್ನಾಟಕ ರಕ್ಷಣಾ ವೇದಿಕೆ ಇಂಡಿ ತಾಲೂಕಾ ಉಪಾಧ್ಯಕ್ಷ ಪ್ರಕಾಶ ಬಿರಾದಾರ , ಕ.ರ.ವೆ ಝಳಕಿ ವಲಯದ ಅಧ್ಯಕ್ಷ ರವಿ ಹೂಗಾರ, ಮತ್ತು ಗ್ರಾಮಸ್ಥರು ಆಕ್ರೋಶ ವ್ಯಕ್ತ ಪಡಿಸಿದರು.

ಕಳೆದ ತಿಂಗಳು ಮಾನ್ಯ ಸಂಸದರು ರಮೇಶ ಜಿಗಜಿವಣಿರವರು ಝಳಕಿ ಗ್ರಾಮದ ಪ್ರವಾಸಿ ಮಂದಿರಕ್ಕೆ ಬಂದಾಗ ಈ ವಿಷಯವಾಗಿ ಕರ್ನಾಟಕ ರಕ್ಷಣಾವೇದಿಕೆ ವತಿಯಿಂದ ಜೆ.ಜೆ. ಎಮ್ ಕಾಮಗಾರಿ ಬಗ್ಗೆ ತಿಳಿಸಿದ್ದೆವು, ಅವಾಗ ಸಂಸದರು ರುದ್ರವಾಡಿ ಇವರಿಗೆ ಕರೆಸಿ ಜೆ.ಜೆ. ಎಮ್ ಬಗ್ಗೆ ಆರೋಪ ಬಂದಿದೆ ಇದನ್ನು ಸರಿಯಾಗಿ ಕಾಮಗಾರಿ ಮಾಡಿಸಿ, ಬಿಲ್ಲ ಮಾಡುವಂತೆ ತಿಳಿಸಿದ್ದರು, ಆವಾಗ ಇಲ್ಲಿನ ತಾಲೂಕಾ ಅಧಿಕಾರಿ ರುದ್ರಮಾಡಿ ರವರು ಜೆ.ಜೆ.ಎಮ್ ಕಾಮಗಾರಿಯ ಯಾವುದೆ ಬಿಲ್ಲ ಮಾಡಿಲ್ಲವೆಂದು ಸಂಸದರಿಗೆ ಸುಳ್ಳು ಉತ್ತರ ನೀಡಿ ದಾರಿತಪ್ಪಿಸಿದ್ದರು,ಅದನ್ನೆನಾವು ಮಾಹಿತಿ ಹಕ್ಕಿನ ಮುಖಾಂತರ ಲಿಖಿತವಾಗಿ ಕೇಳಿದಾಗ 2ಕೋಟಿ 9ಲಕ್ಷ ಬಿಲ್ ಪಾಸಮಾಡಿರುವುದಾಗಿ ತಿಳಿಯಿತು, ಒಬ್ಬ ಅಧಿಕಾರಿ ಸಂಸದರಿಗೆ ಸುಳ್ಳು ಹೇಳುವುದು ಸರಿಯಲ್ಲ ಇದನ್ನು ಕೂಡಲೇ ಸಂಸದರು ಕಾನೂನಾತ್ಮಕವಾಗಿ ವಿಚಾರಣೆ ನಡೆಸಿ ತಕ್ಕ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಒತ್ತಾಯಿಸಿದರು.

ಗ್ರಾಮದ ಸಂಜು ಕಾಪಸೆ ನಾನು ಸುಮಾರು ಬಾರಿ ಗ್ರಾಮ ಪಂಚಾಯತಗೆ ತೆರಳಿ ಖುದ್ದಾಗಿ ಇಲ್ಲಿನ ಸಿಬ್ಬಂದಿಗೆ ಭೆಟಿನೀಡಿ ನಮ್ಮ ಮನೆಯ ಎದುರು ಜೆ.ಜೆ.ಎಮ್ ನಳಕ್ಕೆ ನೀರು ಬಿಡುವಂತೆ



ಮನವಿ ಮಾಡಿದರು ಕ್ಯಾರೆ ಎನ್ನುತ್ತಿಲ್ಲ, ಜೆ.ಜೆ. ಎಮ್ ಕಾಮಗಾರಿ ನಡೆದು ಎರಡು ವರ್ಷ ಗತಿಸಿದರು ಇಲ್ಲಿತನಕ ಒಂದು ತೊಟ್ಟು ನೀರು ಬಂದಲ್ಲ, ಸರ್ಕಾರ ಕೋಟಿಗಟ್ಟಲೆ ಹಣ ಖರ್ಚುಮಾಡಿ ಜೆ.ಜೆ.ಮ್ ಯೋಜನೆ ಪ್ರತಿ ಮನೆ ಮನೆಗೆ ನೀರಿನ ಸೌಲಭ್ಯ ವದಗಿಸಲು ಯೋಜನೆ ಹಮ್ಮಿಕೊಂಡಿದ್ದು, ಇಲ್ಲಿ ಮಾತ್ರ ಯೋಜನೆ ಕೇವಲ ಲಿಖಿತದಲ್ಲಿದೆ, ಆದರೆ ಕೃತಿಯಲ್ಲಿ ಇಲ್ಲಾ ಎಂದು ಇವರ ಆರೋಪ, ಇಲ್ಲಿನ ರುದ್ರವಾಡಿ ಅಧಿಕಾರಿಗೆ ಘಟಾನು ಘಟಿಗಳ ಬೆಂಬಲವಿದೆ, ನೀವು ಯಾರ ಮುಂದೆ ಹೇಳಿದರು ನನಗೆ ಯಾವುದೆ ದೊಂದರೆ ಇಲ್ಲ ಎಂದು ವ್ಯಂಗ್ಯವಾಗಿ ಮಾತನಾಡುತ್ತಾರೆ, ಸಂಸದರಿಗೆ ಹೆದರದ ಇಂತಹ ಅಧಿಕಾರಿಗಳು ಸಾಮಾನ್ಯರ ಜ್ಯೋತೆ ಯಾವರಿತಿಯಲ್ಲಿ ವರ್ತಿಸಬಹುದು ಯೋಚನೆಮಾಡಿ ಎಂದು ಗೋಗರೆದರು.

ಸಂಸದರಿಗೆ ಸುಳ್ಳು ಮಾತನಾಡುವ ಅಧಿಕಾರಿಗಳು ಜನರಿಗೆ ಯಾವರೀತಿಯಲ್ಲಿ ಸ್ಪಂದಿಸುತ್ತಾರೆ ಎನ್ನುವದು ತಿಳಿಯದಾಗಿದೆ, ಸಾಮಾನ್ಯರಿಗೆ ಮರ್ಯಾದೆ ಕೊಡದ ಇಂತಹ ಅಧಿಕಾರಿಗಳು ಮಾಡುವ ಕೇಲಸ ಯಾವರೀತಿಯಲ್ಲಿರಬಹುದು ಉಹಿಸಿದರೆ ಅಬ್ಬಾ ಮೈ ಜುಂಮ್ಮೆನಿಸುತ್ತೆ, ಗ್ರಾಮದಲ್ಲಿ ಮಾಡಿರುವ ಜೆ.ಜೆ.ಎಮ ಕಾಮಗಾರಿ ಸಂಪೂರ್ಣ ಹಾಳಾಗಿದ್ದು, ಸರಿಯಾದ ಸಮಯದಲ್ಲಿ ನೀರು ಬರುವದಿಲ್ಲ, ಬಂದರು ಸರಿಯಾದ ಪ್ರಮಾಣದಲ್ಲಿ ಬರುವದಿಲ್ಲ, ಕೇಳಿದರೆ ಅಸಹ್ಯ ರಿತಿಯಲ್ಲಿ ಮಾತನಾಡುತ್ತಾರೆ, ತಾಲೂಕಿನ ಎಲ್ಲ ಗ್ರಾಮಗಳ ತೊಂದರೆ ಇದೆ ರಿತಿಯಲ್ಲಿದೆ, ಹೀಗಿರುವಾಗ ಈ ಜೆ.ಜೆ. ಎಮ್ ಯೋಜನೆ ಯಾವ ಪುರುಷಾರ್ಥಕ್ಕೆ ತಿಳಿಯದಂತಾಗಿದೆ, ಸರ್ಕಾರ ನೀಡಿರುವ ಹಣದ ಬಳಕೆ ದುರ್ಬಳಕೆ ಯಾಗುತ್ತಿದ್ದರು ಕ್ಯಾರೆ ಎನ್ನದ ಮೇಲಾಧಿಕಾರಿಗಳು,

ಇದರರ್ಥ ಆಧಿಕಾರಿಗಳಿಗೆ ಏನಾದರು ಇದ-ರಿಂದ ಸಹಾಯಾರ್ಥ ಸಿಗುತ್ತಿರಬಹುದು ಎಂದು ಗ್ರಾಮಸ್ಥರು ತಮ್ಮ ನೋವನ್ನು ಪ್ರಕಟಣೆಗೆ ತೋಡಿಕೊಂಡರು, ಒಂದು ವೇಳೆ ಸರಿಯಾದರೀತಿಯಲಿ ತನಿಖೆ ನಡೆಸದೆ ಹೊದಲ್ಲಿ ಮುಂದಿನ ದಿನಗಳಲ್ಲಿ ಗ್ರಾಮಸ್ಥರು, ಮಹೀಳೆಯರು ಕುಡಿಕೊಂಡು ಇಂಡಿ ತಾಲೂಕು ರುದ್ರವಾಡಿ ಸಾಹೇಬರ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ಮಾಡಲಾಗುವದು ಎಂದು ಕರ್ನಾಟಕ ರಕ್ಷಣಾ ವೇದಿಕೆ ಝಳಕಿ ವಲಯದ ಅಧ್ಯಕ್ಷ ರವಿಕುಮಾರ ಹೂಗಾರ ತಿಳಿಸಿದರು.

ಪಿಂಟು ಬಿರಾದಾರ, ಶಂಕರ ಬಡಿಗೇರ, ಪಿಂಟು ಹಾಡ್ಸಂಗೆ, ಹರೀಶ ಶೆಟ್ಟಿ, ಕ.ರ.ವೆ ಸಂಘದ ಸದಸ್ಯರು ಉಪಸ್ಥಿತರಿದ್ದರು.

## ಶಿವಾಜಿ ಮೂರ್ತಿ ಪ್ರತಿಷ್ಠಾಪನೆಗಾಗಿ ಪ್ರತಿಭಟನೆ

**ಬಾಗಲಕೋಟೆ** : ಶಿವಾಜಿ ಮೂರ್ತಿ ಪ್ರತಿಷ್ಠಾಪನೆ ಮಾಡಲು ಅನುಮತಿ ನೀಡಬೇಕು ಎಂದು ಒತ್ತಾಯಿಸಿ, ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಬಿಜೆಪಿ ಪಕ್ಷದ ಮುಖಂಡರು ಪ್ರತಿಭಟನೆ ನಡೆಸಿ, ರಾಜ್ಯಸಭಾ ಸದಸ್ಯ ನಾರಾಯಣಸಾ ನೇತೃತ್ವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ಅವರಿಗೆ ಮುತ್ತಿಗೆ ಹಾಕಿದರು. ಫೆಬ್ರವರಿ 19 ರಂದು ಶಿವಾಜಿ ಜಯಂತಿ ಇದೆ.

ಈ ವಿಶೇಷ ದಿನವೇ ನಿಮ್ಮ ಅಮೃತ ಹಸ್ತದಿಂದ ಶಿವಾಜಿ ಮೂರ್ತಿ ಪ್ರತಿಷ್ಠಾಪನೆ ಮಾಡಬೇಕೆಂದು ಜಿಲ್ಲೆ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ಅವರಿಗೆ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡೆಗೆ ಬಿಜೆಪಿ ಮುಖಂಡರು ಮನವಿ ಸಲ್ಲಿಸಿದರು.

ಎಲ್ಲಾ ದಾಖಲೆಗಳು ಸರಿ ಇದ್ದರೂ, ಮೂರ್ತಿ ಪ್ರತಿಷ್ಠಾಪನೆಗೆ ಜಿಲ್ಲಾಡಳಿತ ಅನುಮತಿ ನೀಡುತ್ತಿಲ್ಲ ಎಂದು ಆರೋಪಿಸಿದರು. ಈ ಸಂದರ್ಭದಲ್ಲಿ ಎಸ್ಪಿ ಅಮರನಾಥ ರೆಡ್ಡಿ ಮಾತನಾಡಿ, ಹಿಂದೆ ನೀವು ಸಲ್ಲಿಸಿದ್ದ ಅನುಮತಿಯನ್ನು



ಜಿಲ್ಲಾಡಳಿತ ರದ್ದುಪಡಿಸಿದೆ. ಈಗ ಎಲ್ಲಾ ದಾಖಲೆಗಳನ್ನು ನೂತನವಾಗಿ ಸಲ್ಲಿಸಿ, ಕಾನೂನು ಪ್ರಕಾರ ಅನುಮತಿ ಪಡೆದುಕೊಳ್ಳಬೇಕಾಗಿದೆ ಎಂದು ತಿಳಿಸಿದರು. ಸಚಿವರು ಸಹ ಅನುಮತಿ ಪಡೆದುಕೊಂಡು ಶಿವಾಜಿ ಪುತ್ಥಳಿ ಸ್ಥಾಪನೆ ಮಾಡಿಕೊಳ್ಳಿ ಎಂದು ತಿಳಿಸಿದರು ಈ ಸಂದರ್ಭದಲ್ಲಿ ಸಂಸದ ಪಿ.ಸಿ. ಗದ್ದಿಗೌಡರ್, ಅಶೋಕ ಲಿಂಬಾವಳಿ, ನಗರ ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು, ಸಭಾಪತಿ, ಮರಾಠಾ ಸಮಾಜದ ಮುಖಂಡರು ಮತ್ತು ಬಿಜೆಪಿ ಮುಖಂಡರು ಭಾಗವಹಿಸಿದ್ದರು.

# ಸ್ವಯಂ ರಕ್ಷಣೆಗಾಗಿ ವಿದ್ಯಾರ್ಥಿನಿಯರು ಕರಾಟೆ ಕಲಿಯಿರಿ



**ಅಥಣಿ :** ಕರಾಟೆ ಜಗತ್ತಿನ ಅತ್ಯಂತ ಹೆಚ್ಚಿಗೆ ಕಲಿಸಲಾಗುವ ಅತ್ಯಂತ ಜನಪ್ರಿಯವಾಗಿರುವ ಸಮರ ಕಲೆಯಾಗಿದೆ. ಈ ಕಲೆಯನ್ನ ರೂಡಿಸಿಕೊಂಡವರಿಗೆ ದೇಹದ ಎಲ್ಲಾ ಸ್ನಾಯುಗಳು ಮತ್ತು ಮೂಳೆಗಳು ಚೆನ್ನಾಗಿ ಕೆಲಸ ಮಾಡುತ್ತವೆ. ಶಾಲಾ ವಿದ್ಯಾರ್ಥಿಗಳು ಪಠ್ಯಪುಸ್ತಕದ ಅಭ್ಯಾಸದೊಂದಿಗೆ ಕ್ರೀಡೆಗಳಲ್ಲಿ ಮತ್ತು ಕರಾಟೆ ಅಂತಹ ಸಮರ ಕಲೆಗಳನ್ನು ರೂಡಿಸಿಕೊಳ್ಳಬೇಕು ಎಂದು ಉದ್ಯಮಿ ಹಾಗೂ ಸಮಾಜ ಸೇವಕ ಉದಯ ಗುಂಡಾ ಹೇಳಿದರು.

ಅವರು ಅಥಣಿ ಪಟ್ಟಣದ ಸಂಸ್ಕೃತ ಬಡಾವಣೆಯಲ್ಲಿ ಶೋಟೋಕಾನ್ ಕರಾಟೆ ತರಬೇತಿ ಸಂಸ್ಥೆಯಿಂದ ಶಾಲಾ, ಕಾಲೇಜಿನ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಕರಾಟೆ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢತೆ ಹೊಂದಲು ಕರಾಟೆ ಅಂತಹ ಕಲೆಗಳನ್ನು ರೂಡಿಸಿಕೊಳ್ಳಬೇಕು. ಇಂದಿನ ಸಮಾಜದಲ್ಲಿ ಮಹಿಳೆಯರ, ವಿದ್ಯಾರ್ಥಿನಿಯರ ಮೇಲೆ ಸಾಕಷ್ಟು ದೌರ್ಜನ್ಯ ನಡೆಯುತ್ತಿದೆ. ಆದರಿಂದ ವಿದ್ಯಾರ್ಥಿನಿಯರು ಸ್ವರಕ್ಷಣೆಗಾಗಿ ಕರಾಟೆ ತರಬೇತಿ ಅತ್ಯಂತ ಸೂಕ್ತ ಕಾರ್ಯಕ್ರಮವಾಗಿದೆ ಎಂದು ಹೇಳಿದರು.

ಭಾರತ ಮಾತೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ಉಪನ್ಯಾಸಕ ರಾವಸಾಬ ಅಂಬಿ ಮಾತನಾಡಿ ವಿದ್ಯಾರ್ಥಿಗಳಲ್ಲಿ ಮೊದಲು ಸಾಧಿಸುವ ಛಲ ಇರಬೇಕು, ಪಾಲಕರು ಮತ್ತು ಮಾರ್ಗದರ್ಶಕರು ಉತ್ತಮವಾದ ಮಾರ್ಗದರ್ಶನ ನೀಡಿದಾಗ ಮಕ್ಕಳು ತಮ್ಮ ಪ್ರಜೆಗಳಾಗಿ ಬೆಳೆಯಲು ಸಾಧ್ಯ. ಈ ನಿಟ್ಟಿನಲ್ಲಿ ನಾವು ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಭಾರತೀಯ ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳನ್ನು ಕಲಿಸಿ ಕೊಡಬೇಕಾದ ಅಗತ್ಯವಿದೆ ಎಂದು ಹೇಳಿದ ಅವರು ಸದೃಢ ಭಾರತವನ್ನು ಕಟ್ಟಲು ಸದೃಢ ಮತ್ತು ಆರೋಗ್ಯವಂತ ಮಕ್ಕಳನ್ನು ನಾವು ರೂಪಿಸಬೇಕು. ಈ ನಿಟ್ಟಿನಲ್ಲಿ ಕ್ರೀಡೆಗಳು ಮತ್ತು ಕರಾಟೆ ಇಂತಹ ಸಮರ ಕಲೆ ಬಹಳಷ್ಟು ಸಹಕಾರಿಯಾಗಲಿದೆ. ವಿದ್ಯಾರ್ಥಿನಿಯರು ತಮ್ಮಲ್ಲಿಯ ಹಿಂಜರಿಕೆ ಸ್ವಭಾವವನ್ನು ಹೊಡೆದು ಹಾಕಲು ಕರಾಟೆ ಹಾಗೂ ಕ್ರಿ?ಡಾ ಚಟುವಟಿಕೆಗಳನ್ನು ರೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಥಣಿ ಶೋಟೋಕಾನ್ ಕರಾಟೆ ತರಬೇತಿ ಸಂಸ್ಥೆಯ ಮುಖ್ಯಸ್ಥ ಮೋಹನ್ ರಜಪೂತ ಮಾತನಾಡಿ ಈ ಕರಾಟೆ ಕಲಿಯನ್ನ ಜಪಾನದ ಓಕಿನಾಮಾದವರು ಪ್ರಾರಂಭಿಸಿದರು. ಈ ಕಲೆಯಲ್ಲಿ ಕಟಾ, ಪಂಚ್ ಮತ್ತು ಕಿಕ್ ಮೇಲೆ ಕೇಂದ್ರೀಕೃತವಾಗಿರುತ್ತದೆ. ಇಂತಹ ಸಮರ ಕಲೆಯನ್ನು ಅನೇಕ ವಿದ್ಯಾರ್ಥಿಗಳು ನಮ್ಮ ಸಂಸ್ಥೆಯಿಂದ ಪಡೆದುಕೊಂಡು ಬ್ಲಾಕ್ ಬೆಲ್ಟ್ ಶ್ರೇಣಿಯಲ್ಲಿ ಉತ್ತೀರ್ಣರಾಗಿ ವಿವಿಧ ಕರಾಟೆ ಚಾಂಪಿಯನಶಿಪ್ ಗಳಲ್ಲಿ ಭಾಗವಹಿಸಿ ಉತ್ತಮ ಸಾಧನೆ ಮಾಡಿದ್ದಾರೆ. ಇತ್ತೀಚೆಗೆ ರಾಜ್ಯ ಸರ್ಕಾರವು ಕೂಡ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮಕ್ಕಳಿಗೆ ಆತ್ಮ ರಕ್ಷಣೆಗಾಗಿ ಈ ಕಲೆಯನ್ನು ತರಬೇತಿ ನೀಡುವಂತೆ ಸೂಚನೆ ನೀಡಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಿಪ್ಲೋಮಾ ಇನ್ ಕರಾಟೆ ಅಭ್ಯಾಸ ಮುಗಿಸಿ ಬ್ಲಾಕ್ ಬೆಲ್ಟ್ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು.

ಈ ವೇಳೆ ಹಿರಿಯ ಯೋಗ ಶಿಕ್ಷಕ ಶ್ರೀಶೈಲ ಪಾಟೀಲ, ಶಿಕ್ಷಣ ಪ್ರೇಮಿ ಪ್ರಕಾಶಗೌಡ ಪಾಟೀಲ, ಪ್ರಶಾಂತ್ ಸಗರಿ, ರಾಜಣ್ಣ ಸೋಮಯ್ಯ, ಆನಂದ ಗುಂಡಾ, ಅಣ್ಣಾಸಾಹೇಬ ತೆಲಸಂಗ, ಮೋಹನ್ ರಜಪೂತ, ವಿನಾಯಕ್ ಕೊಲ್ಲಾಪುರ, ಅವಿನಾಶ ಅಂಬಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಮುಗಿಸಲು ಕ್ರಮ ಕೈಗೊಳ್ಳಿ: ಸಚಿವ ಎನ್. ಎಸ್ ಭೋಸರಾಜು ಸೂಚನೆ



**ಬೆಳಗಾವಿ :** ಗುಣಮಟ್ಟ ಕಾಯ್ದುಕೊಂಡು, ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಿ ರೈತರಿಗೆ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳುವಂತೆ *ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್ ಎಸ್ ಭೋಸರಾಜು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಂದು ಲೋಕೋಪಯೋಗಿ ಮತ್ತು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ್ ಜಾರಕಿಹೋಳಿ, ಶಾಸಕರಾದ ನಿಖಿಲ್ ಕತ್ತಿ ಅವರೊಂದಿಗೆ ಬೆಳಗಾವಿ ವಿಭಾಗದ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಕಾಮಗಾರಿಗಳ ಪರಿಶೀಲನೆ ನಡೆಸಿ ಮಾತನಾಡಿದರು.

ಸುಲ್ತಾನಪುರ ಏತ ನೀರಾವರಿ ಯೋಜನೆಯ ಮೂಲಕ 19 ಕೆರೆಗಳನ್ನು ತುಂಬುವ ಕಾಮಗಾರಿ, ಯರನಾಳದಲ್ಲಿನ ಬ್ರಿಡ್ಜ್ ಕಂ ಬ್ಯಾರೇಜ್‌ನ ಪರಿವೀಕ್ಷಣೆ ನಡೆಸಿದ ನಂತರ ಹುನ್ನೂರು ಪ್ರವಾಸಿ ಮಂದಿರಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಬೆಳಗಾವಿ ವಿಭಾಗದ ಅಡಿಯಲ್ಲಿ ಕೈಗೊಳ್ಳಲಾಗುತ್ತಿರುವ ಏತ ನೀರಾವರಿ, ಬ್ರಿಡ್ಜ್ ಕಂ ಬ್ಯಾರೇಜ್ ಹಾಗೂ ಚೆಕ್ ಡ್ಯಾಂ ಕಾಮಗಾರಿಗಳ ಪ್ರಗತಿಯ ಬಗ್ಗೆ ಸಮಗ್ರ ಮಾಹಿತಿಯನ್ನು ಸಚಿವರು ಪಡೆದುಕೊಂಡರು. ಅನಗತ್ಯ ವಿಳಂಬವಾಗುತ್ತಿರುವ ಯೋಜನೆಗಳ ಬಗ್ಗೆ ಮಾಹಿತ ಪಡೆದುಕೊಂಡ ಸಚಿವರು ಇದಕ್ಕೆ ಕಾರಣರಾದ ಅಧಿಕಾರಿಗಳನ್ನು ತರಾಟೆಗೆ ತಗೆದುಕೊಂಡರು.

ಗುಣಮಟ್ಟವನ್ನು ಕಾಯ್ದುಕೊಂಡು ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಬೇಕು. ಯಾವ ಕಾಮಗಾರಿಗಳಲ್ಲಿ ಅನಗತ್ಯ ವಿಳಂಬವಾಗುತ್ತಿದಿಯೋ ಅಂತಹ ಕಡೆಗಳಲ್ಲಿ ಟೆಂಡರ್‌ಗಳನ್ನು ರದ್ದುಗೊಳಿಸಿ ರಿ ಟೆಂಡರ್ ಪ್ರಕ್ರಿಯೆ ಪ್ರಾರಂಭಗೊಳಿಸುವಂತೆ ಇದೇ ಸಂಧರ್ಭದಲ್ಲಿ ಅಧಿಕಾರಿಗಳಿಗೆ ಸಚಿವರಾದ ಭೋಸರಾಜು ಸೂಚನೆ ನೀಡಿದರು.

# ಗ್ರಾಮೀಣ ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ: ಸಚಿವ ಸತೀಶ ಜಾರಕಿಹೊಳಿ



**ಬೆಳಗಾವಿ :** ದೇಶಿ ಕ್ರೀಡೆಗಳು ಅವನತಿಯತ್ತ ಸಾಗುತ್ತಿವೆ. ಗ್ರಾಮೀಣ ಕ್ರೀಡೆ ನಮ್ಮ ಜೀವಾಳವಾಗಿದೆ. ಹೀಗಾಗಿ ಗ್ರಾಮೀಣ ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದು ಸಚಿವ ಸತೀಶ ಜಾರಕಿಹೊಳಿ ಅವರು ಹೇಳಿದರು.

ತಾಲೂಕಿನ ಶಿವಸ್ಮಾರಕ ಯಳ್ಳೂರಿನಲ್ಲಿ ಶ್ರೀರಾಮ್ (ಕನ್ಸ್ಟ್ರಕ್ಷನ್) ಬಿಲ್ಡರ್ಸ್, ಡೆವಲಪರ್ಸ್ ಮತ್ತು ಇಂಜಿನಿಯರ್ಸ್ ವತಿಯಿಂದ ಆಯೋಜಿಸಲಾದ 'ಜಾಯ್ ಸ್ಟ್ರೀಟ್' ಗ್ರಾಮೀಣ ಕ್ರೀಡೆಗಳ ಉಚಿತ ಕ್ರೀಡಾಕೂಟವನ್ನು ಉದ್ಘಾಟಿಸಿ ಸಚಿವರು ಮಾತನಾಡಿದರು.

ಕ್ರೀಡೆಗಳ ಸೊಗಸು ಇರುವುದೇ ಗ್ರಾಮೀಣ ಕ್ರೀಡೆಗಳಲ್ಲಿ. ಗ್ರಾಮೀಣ ಭಾಗದಲ್ಲಿಯೇ ಹೆಚ್ಚು ಕ್ರೀಡಾಪಟುಗಳು ಇದ್ದಾರೆ. ಆದರೆ ನಿರ್ಲಕ್ಷ್ಯಕ್ಕೆ ಒಳಗಾಗಿ ಪ್ರತಿಭೆಗಳು ಇದ್ದು ಇಲ್ಲದಂತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು. ಗ್ರಾಮೀಣ ಪ್ರದೇಶದ ಜನಪದ ದೇಸಿ ಆಟಗಳಿಗೆ ಯುವಕರು ಮಹತ್ವ ನೀಡಬೇಕು ಎಂದು ಹೇಳಿದರು.

ನಮ್ಮನ್ನು ಯುವಕರನ್ನಾಗಿಸುವ, ಮಾನಸಿಕ ಆರೋಗ್ಯ ಹಾಗೂ ಚೈತನ್ಯಶೀಲರಾಗಿಸುವ ಶಕ್ತಿ ಗ್ರಾಮೀಣ ಕ್ರೀಡೆಯಲ್ಲಿದೆ. ಕ್ರೀಡೆಯೊಳಗೆ ಜನಪದ ಸಂಸ್ಕೃತಿಯಿದೆ. ಜನಪದ ಸಂಸ್ಕೃತಿ ಉಳಿಸಲು ಇಂತಹ ಕ್ರೀಡೆಗಳ ಕಡೆ ಗಮನ ಹರಿಸಬೇಕು ಎಂದು ತಿಳಿಸಿದರು. ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಉಪಯುಕ್ತವಾಗಿರುವ ದೇಶಿ ಕ್ರೀಡೆಗಳ ಬಗ್ಗೆ ಜಾಗೃತಿ ಮೂಡಿಸಿ, ಗ್ರಾಮೀಣ ಪ್ರತಿಭೆಗಳನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುತ್ತಿರುವ ಅರವಿಂದ ಟಕ್ಕೇಕರ್ ಕಾರ್ಯ ಶ್ಲಾಘನೀಯವಾಗಿದೆ.

ಉಚಿತ ಕ್ರೀಡಾಕೂಡ ಆಯೋಜಿಸಿ ಮಕ್ಕಳಿಗೆ ಅವಕಾಶ ಕಲ್ಪಿಸಿರುವುದು ಸಂಸತ ವಾಗಿದೆ. ಮುಂದಿನ ದಿನಗಳಲ್ಲಿ ಹತ್ತಾರು ಸಂಘ-ಸಂಸ್ಥೆಗಳು ಇವರೊಂದಿಗೆ ಕೈ ಜೋಡಿಸಿ ಗ್ರಾಮೀಣ ಪ್ರತಿಭೆಗಳನ್ನು ಬೆಳೆಸುವ ಪ್ರಯತ್ನ ಮಾಡಬೇಕು. ಈ ಕ್ರೀಡೆಯನ್ನು ನಿರಂತರವಾಗಿ ಸಾಗಲಿ, ಇದಕ್ಕೆ ಬೇಕಾದ ಸಹಕಾರ-ಸಹಾಯ ಸತೀಶ ಜಾರಕಿಹೊಳಿ ಫೌಂಡೇಶನ್ ದಿಂದ ನೀಡಲಾಗುವುದು. ಗ್ರಾಮೀಣ ಪ್ರತಿಭೆಗಳನ್ನು ಬೆಳೆದರೆ ದೇಶ ಬೆಳೆಯದಂತೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಖ್ಯ ಪ್ರಾಯೋಜಕರಾದ ಶ್ರೀರಾಮ್ ಬಿಲ್ಡರ್ಸ್ ವತಿಯಿಂದ ಆಯೋಜಿಸಲಾದ ಫ್ಲ್ಯಾಶ್ ಮಾಬ್, ಸೈಕ್ಲಿಂಗ್, ಜುಂಬಾ, ಫುಟ್‌ಬಾಲ್, ಅಲ್ಲೆ ಕ್ರಿಕೆಟ್, ಚೆಸ್, ಕೇರಂ, ಬ್ಯಾಡ್ಮಿಂಟನ್, ಯೋಗ, ಧ್ಯಾನ, ಸ್ಕೇಟಿಂಗ್, ಹಗ್ಗ ಎಳೆಯುವುದು, ಜಂಪ್ ರೋಪ್, ಮೈಂಡ್ ಫುಲ್ ಚಟುವಟಿಕೆಗಳು, ಒಂದು ನಿಮಿಷದ ಚಾಲೆಂಜ್ ಆಟ, ಸ್ಟ್ರೀಟ್ ಆರ್ಟ್, ಭೌರಾದಿಂದ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಸ್ಟ್ರೀಟ್ ಕ್ರಿಕೆಟ್ ಕ್ರೀಡೆಗಳಲ್ಲಿ ನೂರಾರು ಕ್ರೀಡಾಪಟುಗಳು ಭಾಗವಹಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಈ ಸಂದರ್ಭದಲ್ಲಿ ಶ್ರೀರಾಮ್ (ಕನ್ಸ್ಟ್ರಕ್ಷನ್) ಬಿಲ್ಡರ್ಸ್ , ಡೆವಲಪರ್ಸ್ ಮತ್ತು ಇಂಜಿನಿಯರ್ ಅರವಿಂದ ಟಕ್ಕೇಕರ್ , ಜಿಲ್ಲಾ ಕಾಂಗ್ರೆಸ್ ಪ್ರದಾನ ಕಾರ್ಯದರ್ಶಿ ಪ್ರದೀಪ ಎಂ.ಜೆ, ಕಾಂಗ್ರೆಸ್ ಮುಖಂಡ ಅರವಿಂದ ಕಾರ್ಚಿ, ಗೊರಾಲ್, ಕೆಪಿಸಿಸಿ ಸದಸ್ಯರಾದ ಮಲಗೌಡ ಪಾಟೀಲ ಹಾಗೂ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು, ಗ್ರಾಮಸ್ಥರು ಇತರರು ಇದ್ದರು.

# ರಸ್ತೆ ಡಾಂಬರೀಕರಣ ಕಾಮಗಾರಿ ಸ್ಥಳಕ್ಕೆ ನಗರಸಭಾಧ್ಯಕ್ಷ ಪಟೇಲ್ ಭೇಟಿ ವೀಕ್ಷಣೆ



**ಕೊಪ್ಪಳ :** ನಗರದ 27ನೇ ವಾರ್ಡಿನ ಬಿಟಿ ಪಾಟೀಲ್ ನಗರ್ ಬಡಾವಣೆ ಯಲ್ಲಿನ ರಸ್ತೆ ಉಪ ರಸ್ತೆಗಳ ದುರಸ್ತಿ ಮತ್ತು ಡಾಂಬರೀಕರಣ ಕಾಮಗಾರಿ ಸ್ಥಳಕ್ಕೆ ಬುಧವಾರ ಕೊಪ್ಪಳ ನಗರಸಭಾಧ್ಯಕ್ಷರಾದ ಅಮ್ಜದ್ ಪಟೇಲ್ ಭೇಟಿ ಮಾಡಿ ಕಾಮಗಾರಿಯನ್ನು ವೀಕ್ಷಿಸಿ ಪರಿಶೀಲನ ಕಾರ್ಯ ನಡೆಸಿದರು, ನಂತರ ಸಂಬಂಧಿಸಿದ ಗುತ್ತಿಗೆದಾರರಿಗೆ ಮತ್ತು ನಗರಸಭೆ ಅದ್ದಿಕಾರಿಗಳಿಗೆ ಸೂಚನೆ ನೀಡಿ ಗುಣಮಟ್ಟದ ಕಾಮಗಾರಿ ಮಾಡಬೇಕು ನಿಗದಿತ ಅವಧಿ ಒಳಗೆ ಪೂರ್ಣಗೊಳಿಸಬೇಕು ಎಂದು ಅಮ್ಜದ ಪಟೇಲ್ ತಿಳಿಸಿದರು. ಈ ಸಂದರ್ಭದಲ್ಲಿ ಕೊಪ್ಪಳ ನಗರಸಭೆ ಕಿರಿಯ ಅಭಿಯಂತ ಸೋಮಲಿಂಗಪ್ಪ, ಗುತ್ತಿಗೆದಾರ ಮಹೇಶ್ ಹಳ್ಳಿಗುಡಿ ಸೇರಿದಂತೆ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು.

# ಡೋಹರ್ ಕಕ್ಕಯ್ಯ ಸಮುದಾಯದಿಂದ ಬೃಹತ್ ಪ್ರತಿಭಟನೆ



**ಇಂಡಿ :** ಡೋಹರ್ ಸಮುದಾಯವನ್ನು 4 ನೇ ಗುಂಪಿನಲ್ಲಿ ಇರಿಸಲಾಗಿರುವ ಕ್ರಮವನ್ನು ಆಗ್ರಹಿಸಿ ಸಮಾಜಕ್ಕೆ ಆಗಿರುವ ಅನ್ಯಾಯಕ್ಕೆ ಮಿನಿ ವಿಧಾನಸೌಧ ಎದುರು ಸಮಾಜ ಬಾಂಧವರು ಪ್ರತಿಭಟಿಸಿದರು.

ಭೀಮಾ ಶಂಕರ ಸಕ್ಕರೆ ಕಾರ್ಖಾನೆ ನಿರ್ದೇಶಕ ಮತ್ತು ನ್ಯಾಯವಾದಿ ಅಶೋಕ ಗಜಾಕೋಶ ಮಾತನಾಡಿ ಪರಿಶಿಷ್ಠ ಜಾತಿ ವರ್ಗೀಕರಣದಲ್ಲಿ ಡೋಹರ್ ಕಕ್ಕಯ್ಯ ಸಮುದಾಯವನ್ನು ಅವೈಜ್ಞಾನಿಕವಾಗಿ 4 ನೇ ಗುಂಪಿನಲ್ಲಿ ಇರಿಸಲಾಗಿದೆ.

ಸಮುದಾಯವು ಚರ್ಮ ಸಂಬಂದಿತ ಸಮುದಾಯವಾಗಿದ್ದು ಚರ್ಮ ಸಂಬಂದಿತ ಕಸಬು ಮಾಡುವ ಮಾದಿಗ ಹಾಗೂ ಸಮಗಾರ, ಚಮ್ಮಾರ ಮೋಚಿ ಜಾತಿಗಳಿದ್ದು ಅವರಿಗೆ ಒಂದನೇಯ ಗುಂಪಿನಲ್ಲಿ ಸೇರಿಸಿ 6 ಪ್ರತಿಶತ ಮೀಸಲಾತಿ ನೀಡಿದ್ದಾರೆ ಎಂದರು.

ನಿವೃತ್ತ ಉಪನ್ಯಾಸಕ ಸುರೇಶ ಕಟಕಕೊಂಡ ಮಾತನಾಡಿ ಡೋಹರ್ ಕಕ್ಕಯ್ಯ ಸಮುದಾಯವನ್ನು ಅತಿ ಸಣ್ಣ ಮತ್ತು ಅಲೆಮಾರಿ ಜನಾಂಗ ಎಂದು ತಿಳಿದು 89 ಸಮುದಾಯದಲ್ಲಿ ಸೇರ್ಪಡೆ ಮಾಡಿದ್ದಾರೆ ಕಾರಣ ಒಂದನೇಯ ಗುಂಪಿನಲ್ಲಿರಿಸಿ ಶೇಕಡಾ 6 ಮಿಸಲಾತಿ ಒದಗಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್.ಆರ್.ಪೊ?ಳ , ಮಳಸಿದ್ದ ಗಜಾಕೋಶ, ಮಾರುತಿ ಇಂಗಳೆ, ಜಗದೀಶ ಗಜಾಕೋಶ, ಶಿವಾಜಿ ನಾರಾಯಣಕರ, ಶರತ ಗಜಾಕೋಶ, ಅಮೀತ ಇಂಗಳೆ, ತುಳಜಾರಾಮ ಇಂಗಳೆ, ಸುಧೀರ ಕಟಕದೊಂಡ, ಕಿರಣ ಕಟಕದೊಂಡ, ಮಾನಪ್ಪ ಹೊಟಕರ, ,ಕಲ್ಲುಚಾಂದಕವಟೆ, ಆನಂದಪ್ಪಾ ಹೊಟಕರ ನಿತಿನ್ ಹೋಟಕರ,ಮಂಜು ಹೋಟಕರ,ರೋಹಿತ್ ಗಜಕೋಶ್ ಮತ್ತಿತರಿದ್ದರು. ಕಂದಾಯ ಉಪವಿಬಾಗಾಧಿಕಾರಿ ಅಬೀದ ಗದ್ಯಾಳ ಇವರಿಗೆ ಮನವಿ ಸಲ್ಲಿಸಿದರು.

# ಬಳ್ಳೊಳ್ಳಿ ಗ್ರಾಮದ ಶಾಲಾ, ಕಾಲೇಜು, ಅಂಬೆಡ್ಕರ, ಕನಕದಾರಸ ವೃತ್ತದಲ್ಲಿ 76ನೇ ಗಣರಾಜ್ಯೋತ್ಸವ



**ಝುಳಕಿ :** ಬಳ್ಳೊಳ್ಳಿ ಗ್ರಾಮದ ಭಾರತ ಮಾತಾ ಪ್ರಾಥಮಿಕ ಶಾಲೆ, ಸರ್ಕಾರಿ ಕನ್ನಡ ಗಂಡು ಮಕ್ಕಳ ಶಾಲೆ, ಅಂಬೇಡ್ಕರ ವೃತ್ತ್, ಶ್ರೀ ವೀರಭದ್ರೇಶ್ವರ ಪ್ರೌಢ ಶಾಲೆ, ಕನಕದಾಸ ವೃತ್ತದಲ್ಲಿ 76ನೇ ಗಣರಾಜ್ಯೋತ್ಸವ ಸಂಪ್ರದಾಯಕ, ಕಾನೂನಾತ್ಮಕವಾಗಿ ಗ್ರಾಮ ಪಂಚಾಯತ ಅಧ್ಯಕ್ಷರು, ಸೈನಿಕರ ಸಹಯೋಗದಲ್ಲಿ ಅತಿವಿಜೃಂಬಣೆಯಿಂದ ಆಚರಣೆ ಮಾಡಲಾಯಿತು.

ಭಾರತ ಮಾತಾ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಸ್ಕೌಟ್ ಆಯಿಂಡ ಗೈಡ್ಸ ವೇಷ ಭೂಷಣದಲ್ಲಿ ದೇಶ ಕಾಯುವ ವೀರ ಯೋಧ ಗಣಪತಿ ನಾಯಕೋಡಿ ಮತ್ತು ನಿವೃತ್ತ ಯೋಧ ಅರ್ಜುನ ಸರಗರ ಮತ್ತು ಅಧ್ಯಕ್ಷರಿಗೆ,ಹಿರಿಯರಿಗೆ ಸ್ವಾಗತ ಕೋರುತ್ತಾ ಪರೇಡ್ ನಡೆಸಿ ಗ್ರಾಮಸ್ಥರ ಮನಗೆದ್ದರು.

ಧ್ವಜಾರೋಹಣ ಮಾಡುವದರೊಂದಿಗೆ ಯೋಧ ಅರ್ಜುನ ಸರಗರ ಮಾತನಾಡಿ ಗಣರಾಜ್ಯೋತ್ಸವ, ಸ್ವತಂತ್ರೋತ್ಸವ, ಗಣ್ಯರ, ಮಹಾನವ್ಯಕ್ತಿಗಳ ಜಯಂತಿ ಉತ್ಸವಗಳನ್ನು ಸರ್ಕಾರ ನಿಯಮ ಮಾಡಿರುವುದರಿಂದ ಆಚರಣೆ ಮಾಡುವುದು ರೂಢಿಯಾಗಬಾರದು, ಇಂದಿನ ಬಾಲಕ ನಾಳಿನ ನಾಯಕ ಎನ್ನುವಂತೆ, ದೇಶಕ್ಕೆ, ಹಿರಿಯರಿಗೆ ಮರ್ಯಾದೆ, ಗೌರವಿಸೋದು ವಿದ್ಯಾರ್ಥಿಗಳಲ್ಲಿ ಸಿಸ್ತಿನ ನಡುವಳಿಕೆ ಬಂದಾಗ ಮಾತ್ರ ನಮ್ಮ ದೇಶ ಉದ್ಧಾರ , ನಾವುಗಳು ಒಂದು ಸಸಿ ನೆಡೊದು ಎಷ್ಟು ಮುಖ್ಯವೋ ಅದನ್ನು ದಿನಾಲು ನೀರುಣಿಸೊದು, ಸ್ವಚ್ಛತೆ ಕಾಪಡೋದು ಮಾಡಿದಾಗ ಆ ಸಸಿ ಮುಂದೆ ಸಿಸ್ತಿನ ಮರವಾಗಲು ಸಾಧ್ಯ ಎಂದರು, ಈ ಸಂಧರ್ಭದಲ್ಲಿ ವಿದ್ಯಾರ್ಥಿಗಳಿಂದ ಕನ್ನಡ, ಹಿಂದಿ, ಇಂಗ್ಲಿಷ ಭಾಷೆಯಲ್ಲಿ ಭಾಷಣ, ದೇಶ ಭಕ್ತಿಗೀತೆ, ನಾಟಕ, ಕುಣಿತ ಹೀಗೆ ಹಲವಾರು ಸಂಸ್ಕೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಈ ಸಂಧರ್ಭದಲ್ಲಿ ಎಸ್.ಡಿ.ಎಮ್.ಸಿ ಅಧ್ಯಕ್ಷರು ಅನಿಲಗೌಡ ಪಾಟೀಲ, ಗ್ರಾಮ ಪಂಚಾಯತ ಅಧ್ಯಕ್ಷರು ಶಾಂತಾಬಾಯಿ ಮೇಲಿನಮನಿ, ಸದಸ್ಯರು ಕಾಮಣ್ಣಗೌಡ ಬಿರಾದಾರ,

ಮಾದೇವ ಹೀರೆಕುರುಬರ, ಭೀಮಾಶಂಕರ ಸಂಗೋಗಿ, ಸರ್ಕಾರಿ ಶಾಲಾ ಗುರುಮಾತೆ ಶಹಾಜನ ಜಾಲಗಾರ, ಭಾರತ ಮಾತಾ ಶಾಲಾ ಗುರುಮಾತೆ ಭಾರತಿ ಸಲಗರ, ಮಹಾದೇವ ಬಿರಾದಾರ, ಮಾಳಪ್ಪ ಶಿರಶ್ಯಾಡ, ಮಹಾದೇವ ಕದರಿ, ಈರಣ್ಣ ವಾಲಿ, ಪರಶುರಾಮ ಕಾಂಬಳೆ, ಮಹಾದೇವ ದೊಡ್ಡಮನಿ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

# ಅವಕಾಶ ಸಿಕ್ಕಾಗ ನಮ್ಮ ಕಲೆ ಪರಿಚಯಿಸಲು ಮುಂದಾಗಬೇಕು: ಸುಮೇಧಾ ಮಿರಜ


**ಅಥಣಿ :** ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಬ್ರಾಹ್ಮಣ ಸಮ್ಮೇಳನದಲ್ಲಿ ಅಥಣಿ ಪಟ್ಟಣದ ಹವ್ಯಾಸಿ ಸಂಗೀತ ಕಲಾವಿದೆ ಶ್ರೀಮತಿ ಸುಮೇಧಾ ಪ್ರಮೋದ ಮಿರಜ ಭಕ್ತಿ, ಭಾವ ಹಾಗೂ ಮರಾಠಿ ಅಭಂಗ ಹಾಡಿ ಪ್ರೇಕ್ಷಕರನ್ನು ರಂಜಿಸಿ ಮೆಚ್ಚುಗೆ ಪಡೆದುಕೊಂಡರು. ಇದೇ ಮೊದಲ ಬಾರಿಗೆ ಗಡಿಭಾಗದ ಅಥಣಿಯ ಕಲಾವಿದರೊಬ್ಬರು ರಾಜ್ಯ ಮಟ್ಟದ ಬ್ರಾಹ್ಮಣ ಸಮಾವೇಶದಲ್ಲಿ ಸಂಗೀತ ಕಾರ್ಯಕ್ರಮ ನೀಡಿರುವುದು ನಮಗೆಲ್ಲ ಹೆಮ್ಮೆಯ ಸಂಗತಿಯಾಗಿದೆ.

ಗಡಿ ಭಾಗದ ಅಥಣಿಯವಳಾದ ನನ್ನ ಕಲೆ ಮೆಚ್ಚಿ ನನಗೆ ರಾಜ್ಯಮಟ್ಟದ ಸಮ್ಮೇಳನದಲ್ಲಿ ಹಾಡಲು ಅವಕಾಶ ಮಾಡಿಕೊಟ್ಟ ಮಹಾಸಭಾದ ರಾಜ್ಯ ಅಧ್ಯಕ್ಷ ಅಶೋಕ ಹಾರ್ನಳ್ಳಿಯವರಿಗೆ ಕೃತಜ್ಞತೆ ಸಲ್ಲಿಸಿದ ಸುಮೇಧಾ ಮೀರಜ, ಅವಕಾಶ ಬಂದಾಗ ನಮ್ಮ ಕಲೆಯನ್ನು ಪರಿಚಯಿಸುವ ಕಾರ್ಯಕ್ಕೆ ನಾವೆಲ್ಲ ಮುಂದಾಗಬೇಕಿದೆ ಎಂದು ಸ್ಥಳೀಯ ಕಲಾವಿದರನ್ನು ಪ್ರೊ?ರೀತ್ಸಾಹಿಸಿದರು.

ಸಮ್ಮೇಳನದಲ್ಲಿ ಭಾಗವಹಿಸಿದ್ದ ಬ್ರಾಹ್ಮಣ ಮಹಾಸಭಾದ ಅಥಣಿ ತಾಲೂಕಾ ಕಾರ್ಯಾಧ್ಯಕ್ಷ ಡಾ.ವಿಜಯಕುಮಾರ ಚೈನಿ ಮಾತನಾಡಿ, ಅಥಣಿಯ ಕಲಾವಿದರೊಬ್ಬರಿಗೆ ಇಂತಹ ರಾಜ್ಯಮಟ್ಟದ ವೇದಿಕೆಯಲ್ಲಿ ಅವಕಾಶ ದೊರಕಿರುವುದು ನಮಗೆಲ್ಲ ಅಭಿಮಾನದ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ಸ್ಥಳೀಯ ನ್ಯಾಯವಾದಿ ಎನ್. ಕೆ.ಪಾಟೀಲ, ಪುರಸಭಾ ಸದಸ್ಯೆ ಮೃಣಾಲಿನಿ ದೇಶಪಾಂಡೆ, ಡಾ.ಪಿ.ಪಿ. ಮೀರಜ, ಡಾ. ವಾಣಿ ಚೈನಿ, ಸುನೀಲ ಕುಲಕರ್ಣಿ, ಸತೀಶ ಕುಲಕರ್ಣಿ ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದರು.

# ವುಮೆನ್ ಮೀಡಿಯಾ ಸಮಾಜಕ್ಕೂ ಕೊಡುಗೆ ನೀಡಲಿ: ಗೀತಾ



**ವಿಜಯಪುರ :** ವುಮೆನ್ ಮೀಡಿಯಾ ಕ್ಲಬ್ ಕೇವಲ ವಿಭಾಗ ಮತ್ತು ವಿಶ್ವವಿದ್ಯಾನಿಲಯಕ್ಕೆ ಸೀಮಿತವಾಗಿರದೇ ಇದು ಸಮಾಜಕ್ಕೆ ಕೊಡುಗೆ ನೀಡುವಂತಾಗಬೇಕು ಎಂದು ಕೆನಡಾದ ಟೊರೊಂಟೊನ ಸಂವಹನ ತಜ್ಞೆ ಗೀತಾ ನಾಗರಾಜು ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಮಂಗಳವಾರ ಆಯೋಜಿಸಿದ್ದ "ವುಮೆನ್ ಮೀಡಿಯಾ ಕ್ಲಬ್" ಉದ್ಘಾಟಿಸಿ ಅವರು ಮಾತನಾಡಿದರು.

ವುಮನ್ ಮೀಡಿಯಾ ಕ್ಲಬ್ ಮಹಿಳೆಯರಿಗೆ ತಮ್ಮ ಸಾಮರ್ಥ್ಯವನ್ನು ಅರಿತು, ಸಮಾಜದಲ್ಲಿ ಸ್ವತಂತ್ರವಾಗಿ ಮತ್ತು ಯಶಸ್ವಿಯಾಗಿ ಬದುಕಲು ಸಹಾಯ ಮಾಡಬೇಕು. ತರಬೇತಿಗಳು, ಕಾರ್ಯಾಗಾರಗಳು ಮತ್ತು ಜಾಗೃತಿ ಕಾರ್ಯಕ್ರಮಗಳ ಮೂಲಕ ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಸಬೇಕು. ಅವರು ಸ್ವಚ್ಛತೆ, ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ತಮ್ಮ ಕುಟುಂಬ ಹಾಗೂ ಸಮುದಾಯದಲ್ಲಿ ದಾರಿದೀಪವಾಗಿ ಕೆಲಸ ಮಾಡಲು ಪ್ರೇರಣೆ ನೀಡಬೇಕು ಎಂದರು.

ಇದೇ ಸಂದರ್ಭದಲ್ಲಿ ಕೆನಡಾದ ಟೊರೊಂಟೊನ ಬಿ.ವಿ ನಾಗ್ ಕಮ್ಯುನಿಕೇಶನ್ಸ್ ಅಧ್ಯಕ್ಷ ಹಾಗೂ ಇಂಡಿಯಾ ಅಬ್ಸರ್ವರ್ ಪತ್ರಿಕೆಯ ಸಂಪಾದಕ ಬಿ.ವಿ ನಾಗರಾಜು ಮಾತನಾಡಿ, ವುಮನ್ ಮೀಡಿಯಾ ಕ್ಲಬ್ ಮಹಿಳೆಯರಿಗೆ ಮಾತ್ರವಲ್ಲ, ಮಕ್ಕಳಿಗೂ ಶಿಸ್ತಿನ ಹಾದಿಯಲ್ಲಿ ಪ್ರೇರಣೆ ನೀಡಲು ಕಾರ್ಯನಿರ್ವಹಿಸಬೇಕು. ದೌರ್ಜನ್ಯದ ಬಗ್ಗೆ ಅರಿವು ಮೂಡಿಸಲು, ಸ್ವಚ್ಛತಾ ಅಭಿಯಾನ, ಪರಿಸರ ಸಂರಕ್ಷಣೆಯ ಕಾರ್ಯಗಳು, ಹಾಗೂ ಶಿಷ್ಟಾಚಾರದ ಕುರಿತಾದ ಕಾರ್ಯಾಗಾರಗಳನ್ನು ಆಯೋಜಿಸಬೇಕು. ಇದರಿಂದ ಸಮಾಜದಲ್ಲಿ ಮಾನವೀಯತೆ ಮತ್ತು ಸಮಾನತೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಈ ಕಾರ್ಯಕ್ರಮಗಳು ಹೆಣ್ಣುಮಕ್ಕಳಿಗೆ ದಾರಿ ದೀಪವಾಗಿ, ತಮ್ಮ ಜೀವನವನ್ನು ಸದೃಢವಾಗಿ ರೂಪಿಸಲು ಸಹಾಯವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ.ಓಂಕಾರ ಕಾಕಡೆ ಮಾತನಾಡಿ, ವಿದ್ಯಾರ್ಥಿನಿಯರು ತಮ್ಮ ಜೀವನದಲ್ಲಿ ಆದರ್ಶ ವ್ಯಕ್ತಿಗಳ ಆದರ್ಶಗಳನ್ನು ಅನುಸರಿಸಿ, ಆಧುನಿಕ ವಿಚಾರಧಾರೆಗಳನ್ನು ಅಳವಡಿಸಿಕೊಂಡು, ಅವರು ಮಾಡಿದ ಸಾಧನೆಯನ್ನು ಮೀರಿಸುವ ಪ್ರಯತ್ನ ಮಾಡಬೇಕು. ಪ್ರತಿಯೊಬ್ಬ ವಿದ್ಯಾರ್ಥಿನಿಯು ತನ್ನ ಸುತ್ತಲಿನ ಪ್ರಪಂಚವನ್ನು ವಿಸ್ತೃತವಾಗಿ ಅರಿಯಲು ಯತ್ನಿಸಬೇಕು. ಕೇವಲ ಒಂದೇ ವಿಷಯಕ್ಕೆ ಸೀಮಿತವಾಗದೇ, ಬೇರೆ ಬೇರೆ ವಿಷಯಗಳಲ್ಲಿ ಜ್ಞಾನವನ್ನು ಸಂಪಾದಿಸುವುದು ಅತ್ಯಗತ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ತಹಮೀನಾ ಕೋಲಾರ ಮತ್ತು ಸಂದೀಪ ನಾಯಕ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ಸಂಶೋಧನಾ ವಿದ್ಯಾರ್ಥಿನಿಯರು, ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಮತ್ತಿತರರು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State